سُوْرَةُ الْاَنْبِيَاۗءِ مَكِّيَّةٌ — اٰياتها ١١٢ — رکوعاتها ٧

21. ಅಲ್ ಅಂಬಿಯಾ

ಸೂ. 112 — ರು. 7

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

الجزء ١٧

1. *ಜನರ ಲೆಕ್ಕಾಚಾರದ ಸಮಯ ಸಮೀಪಿಸಿದೆ ಮತ್ತು ಅವರಾದರೋ ನಿರ್ಲಕ್ಷ್ಯದಿಂದ ಮುಖ ತಿರುಗಿಸಿಕೊಂಡಿದ್ದಾರೆ.

اِقْتَرَبَ لِلنَّاسِ حِسَابُهُمْ وَهُمْ فِيْ غَفْلَةٍ مُّعْرِضُوْنَ ①

2. ಅವರ ಪ್ರಭುವಿನ ಕಡೆಯಿಂದ ಅವರ ಬಳಿಗೆ ಬರುವ ಯಾವುದೇ ಹೊಸ ಉಪದೇಶವನ್ನು ಆಟೋಟಗಳಲ್ಲಿ ತಲ್ಲೀನರಾಗಿದ್ದುಕೊಂಡು ಅಲಕ್ಷ್ಯಭಾವದಿಂದ ಕೇಳುತ್ತಾರೆ.

مَا يَاْتِيْهِمْ مِّنْ ذِكْرٍ مِّنْ رَّبِّهِمْ مُّحْدَثٍ اِلَّا اسْتَمَعُوْهُ وَهُمْ يَلْعَبُوْنَ ②

3. ಅವರ ಮನಸ್ಸು (ಬೇರೆಯೇ ವಿಚಾರಗಳಲ್ಲಿ) ತನ್ಮಯವಾಗಿವೆ. "ಇವನು ನಿಮ್ಮಂತೆಯೇ ಇರುವ ಓರ್ವ ಮನುಷ್ಯನೇ ತಾನೇ! ಹೀಗಿರುವಾಗ ನೀವು ಕಣ್ಣಾರೆ ಕಾಣುತ್ತ ಮಾಟದ ಬಲೆಯಲ್ಲಿ ಸಿಕ್ಕಿ ಬೀಳುವಿರಾ?" ಎಂದು ಅಕ್ರಮಿಗಳು ಪರಸ್ಪರ ಪಿಸು ಗುಟ್ಟುತ್ತಾರೆ.

لَاهِيَةً قُلُوْبُهُمْ ۭ وَاَسَرُّوا النَّجْوَى ڰ الَّذِيْنَ ظَلَمُوْا ڰ هَلْ هٰذَآ اِلَّا بَشَرٌ مِّثْلُكُمْ ۚ اَفَتَاْتُوْنَ السِّحْرَ وَاَنْتُمْ تُبْصِرُوْنَ ③

4. ಸಂದೇಶವಾಹಕರು ಹೇಳಿದರು: "ನನ್ನ ಪ್ರಭು ಆಕಾಶದಲ್ಲೂ ಭೂಮಿಯಲ್ಲೂ ಆಡಲಾಗುವ ಪ್ರತಿಯೊಂದು ಮಾತನ್ನೂ ಅರಿಯುತ್ತಾನೆ. ಅವನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ."[1]

قٰلَ رَبِّيْ يَعْلَمُ الْقَوْلَ فِي السَّمَاۗءِ وَالْاَرْضِ ۡ وَهُوَ السَّمِيْعُ الْعَلِيْمُ ④

5. "ವಾಸ್ತವದಲ್ಲಿ ದಿಕ್ಕೆಟ್ಟ ಕನಸುಗಳಿವು- ನಿಜವಾಗಿ ಇದೆಲ್ಲ ಇವನ

بَلْ قَالُوْٓا اَضْغَاثُ اَحْلَامٍۢ بَلِ

***ಇಲ್ಲಿಂದ 17ನೆಯ ಕಾಂಡ ಆರಂಭ.**

1. ಅರ್ಥಾತ್- ಪ್ರವಾದಿಯು ಆ ಸುಳ್ಳು ಪ್ರಚಾರ ಮತ್ತು ರಹಸ್ಯ ಮಾತುಗಳ ಅಭಿಯಾನಕ್ಕೆ ಕೊಟ್ಟ ಉತ್ತರವಿಷ್ಟೆ: "ನೀವು ಹೇಳುತ್ತಿರುವ ಮಾತುಗಳನ್ನೆಲ್ಲಾ ಅಲ್ಲಾಹನು ಕೇಳುವವನೂ ಅರಿಯುವವನೂ ಆಗಿದ್ದಾನೆ. ಅದನ್ನು ನೀವು ಜೋರಾಗಿ ಹೇಳಿದರೂ ಮೆಲುಧ್ವನಿಯಲ್ಲಿ ಕಿವಿಯಲ್ಲಿ ಉಸುರಿದರೂ ಸರಿಯೇ" ಅನ್ಯಾಯದಿಂದ ವರ್ತಿಸಲು ಆ ಶತ್ರುಗಳಿಗೆ ಅವರೆಂದೂ ನೇರವಾದ ಪ್ರತ್ಯುತ್ತರವನ್ನು ಕೊಡಲು ಮುಂದಾಗಲಿಲ್ಲ.

ಸ್ವಂತ ಕಲ್ಪನೆ. ನಿಜವಾಗಿ ಇವನೊಬ್ಬ ಕವಿ ಅನ್ಯಥಾ ಗತಕಾಲದ ಸಂದೇಶವಾಹಕರು ನಿದರ್ಶನಗಳೊಂದಿಗೆ ಕಳುಹಿಸಲ್ಪಟ್ಟಿರುವಂತೆ ಇವನೂ ಒಂದು ನಿದರ್ಶನ ತರಲಿ" ಎಂದು ಅವರು ಹೇಳುತ್ತಾರೆ.

افْتَرٰىهُ بَلْ هُوَ شَاعِرٌ ۚ فَلْيَاْتِنَا
بِاٰيَةٍ كَمَآ اُرْسِلَ الْاَوَّلُوْنَ ٥

6. ವಸ್ತುತಃ ಇವರಿಗಿಂತ ಮುಂಚೆ ನಾವು ನಾಶಗೊಳಿಸಿದ ಯಾವ ನಾಡೂ ವಿಶ್ವಾಸವಿರಿಸಲಿಲ್ಲ. ಈಗ ಇವರು ವಿಶ್ವಾಸವಿರಿಸುವರೇ?

مَآ اٰمَنَتْ قَبْلَهُمْ مِّنْ قَرْيَةٍ اَهْلَكْنٰهَا ۚ
اَفَهُمْ يُؤْمِنُوْنَ ٦

7. ಪೈಗಂಬರರೇ, ನಾವು ನಿಮಗಿಂತ ಮುಂಚೆಯೂ ಮನುಷ್ಯರನ್ನೇ ಸಂದೇಶವಾಹಕರಾಗಿ ರವಾನಿಸಿದ್ದೆವು. ಅವರ ಮೇಲೆ ನಾವು 'ದಿವ್ಯವಾಣಿ' ಮಾಡುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ಗ್ರಂಥದವರೊಡನೆ ಕೇಳಿರಿ.

وَمَآ اَرْسَلْنَا قَبْلَكَ اِلَّا رِجَالًا نُّوْحِيْٓ
اِلَيْهِمْ فَسْـَٔلُوْٓا اَهْلَ الذِّكْرِ
اِنْ كُنْتُمْ لَا تَعْلَمُوْنَ ٧

8. ನಾವು ಆ ಸಂದೇಶವಾಹಕರಿಗೆ ಆಹಾರವನ್ನು ಸೇವಿಸದಂತಹ ಶರೀರವನ್ನು ನೀಡಿರಲಿಲ್ಲ ಮತ್ತು ಅವರು ಸದಾ ಕಾಲ ಬದುಕುವವರೂ ಆಗಿರಲಿಲ್ಲ.

وَمَا جَعَلْنٰهُمْ جَسَدًا لَّا يَاْكُلُوْنَ
الطَّعَامَ وَمَا كَانُوْا خٰلِدِيْنَ ٨

9. ಕೊನೆಗೆ ನಾವು ಅವರೊಡನೆ ಮಾಡಿದ ನಮ್ಮ ವಾಗ್ದಾನವನ್ನು ಪೂರೈಸಿದೆವು ಮತ್ತು ಅವರನ್ನೂ ನಾವಿಚ್ಛಿಸಿದ ಇತರರನ್ನೂ ರಕ್ಷಿಸಿದೆವು ಮತ್ತು ಹದಮೀರಿದವರನ್ನು ನಾಶಗೊಳಿಸಿ ಬಿಟ್ಟೆವು.

ثُمَّ صَدَقْنٰهُمُ الْوَعْدَ فَاَنْجَيْنٰهُمْ
وَمَنْ نَّشَآءُ وَاَهْلَكْنَا الْمُسْرِفِيْنَ ٩

10. ಜನರೇ, ನಾವು ನಿಮ್ಮದೇ ಪ್ರಸ್ತಾಪವಿರುವಂತಹ ಒಂದು ಗ್ರಂಥವನ್ನು ನಿಮ್ಮ ಕಡೆಗೆ ಕಳುಹಿಸಿರುವೆವು. ನೀವು ವಿವೇಚಿಸುವುದಿಲ್ಲವೇ?[2]

لَقَدْ اَنْزَلْنَآ اِلَيْكُمْ كِتٰبًا فِيْهِ ذِكْرُكُمْ ۚ
اَفَلَا تَعْقِلُوْنَ ١٠

11. ಎಷ್ಟೋ ಅಕ್ರಮಿ ನಾಡುಗಳನ್ನು ನಾವು ಧ್ವಂಸಗೊಳಿಸಿ ಬಿಟ್ಟೆವು ಮತ್ತು ಅವರ ಬಳಿಕ ಬೇರೊಂದು ಜನಾಂಗವನ್ನು ಮೇಲಕ್ಕೆ ತಂದೆವು.

وَكَمْ قَصَمْنَا مِنْ قَرْيَةٍ كَانَتْ
ظَالِمَةً وَّاَنْشَاْنَا بَعْدَهَا قَوْمًا اٰخَرِيْنَ ١١

12. ಅವರಿಗೆ ನಮ್ಮ ಯಾತನೆಯ ಅರಿವಾದಾಗ ಅಲ್ಲಿಂದ ಪಲಾಯನ ಮಾಡತೊಡಗಿದರು.

فَلَمَّآ اَحَسُّوْا بَاْسَنَآ اِذَا هُمْ
مِّنْهَا يَرْكُضُوْنَ ١٢

2. ಅರ್ಥಾತ್- ಇದರಲ್ಲಿ ಭ್ರಾಮಕ ವಿಷಯಗಳೇನೂ ಇಲ್ಲ. ನಿಮ್ಮ ಪ್ರಸ್ತಾಪವೇ ಇದೆ. ನಿಮ್ಮ ಮನೋಭಾವ ಮತ್ತು ಜೀವನದ ವ್ಯವಹಾರಗಳನ್ನು ಇದರಲ್ಲಿ ಚರ್ಚಿಸಲಾಗಿದೆ. ನಿಮ್ಮ ಪ್ರಕೃತಿ, ಸೃಷ್ಟಿಯ ಸ್ವರೂಪ ಮತ್ತು ಉಗಮ-ಅಂತ್ಯಗಳ, ಬಗ್ಗೆ ಇದರಲ್ಲಿ ಪ್ರಸ್ತಾಪವಿದೆ. ಸತ್ಯವನ್ನು ಸೂಚಿಸುತ್ತಿರುವಂತಹ ನಿಮ್ಮ ನಡುವೆಯೇ ಇರುವ ದೃಷ್ಟಾಂತಗಳನ್ನು ಆಯ್ದು ಸಮರ್ಪಿಸಲಾಗಿದೆ. ನಿಮ್ಮ ಚಾರಿತ್ರ್ಯದಲ್ಲಿನ ಸದ್ಗುಣ-ದುರ್ಗುಣಗಳ ನಡುವಿನ ಅಂತರವನ್ನು ಸ್ಪಷ್ಟಪಡಿಸಿ ತೋರಿಸಲಾಗಿದೆ. ಅವುಗಳೆಲ್ಲವೂ ಸರಿಯಾಗಿವೆ ಎಂದು ನಿಮ್ಮ ಆತ್ಮಸಾಕ್ಷಿಯೇ ಹೇಳುತ್ತದೆ. ಹಾಗಿರುವಾಗ ನಿಮ್ಮ ಬುದ್ಧಿಗೆ ಎಟುಕಲಾರದಂತಹ ಗೊಂದಲಮಯ ಮತ್ತು ಅಸ್ಪಷ್ಟ ವಿಚಾರ ಅದರಲ್ಲಿ ಯಾವುದಿದೆ?

13. (ಆಗ ಹೇಳಲಾಯಿತು:) "ಓಡಬೇಡಿರಿ, ನೀವು ಸುಖಿಸುತ್ತಿದ್ದಂತಹ ಆ ಭೋಗ ಸಾಮಗ್ರಿಗಳ ಕಡೆಗೆ ಮತ್ತು ನಿಮ್ಮ ಆ ಮನೆಗಳಿಗೇ ಹೋಗಿರಿ, ನೀವು ಪ್ರಶ್ನಿಸಲ್ಪಡಲೂ ಬಹುದು."[3]

لَا تَرْكُضُوا وَارْجِعُوٓا إِلَىٰ مَآ أُتْرِفْتُمْ
فِيهِ وَمَسَٰكِنِكُمْ لَعَلَّكُمْ تُسْـَٔلُونَ ﴿١٣﴾

14. ಆಗ ಅವರು, "ಅಯ್ಯೋ, ನಮ್ಮ ದುರದೃಷ್ಟವೇ! ನಿಜಕ್ಕೂ ನಾವು ಅಪರಾಧಿಗಳಾಗಿದ್ದೆವು" ಎನ್ನತೊಡಗಿದರು.

قَالُوا يَٰوَيْلَنَآ إِنَّا كُنَّا ظَٰلِمِينَ ﴿١٤﴾

15. ಮತ್ತು ನಾವು ಅವರನ್ನು ಕೊಯ್ದ ಪೈರಾಗಿ ಹಾಗೂ ಕಿಡಿಯಾರಿದ ಬೂದಿಯ ರಾಶಿಯಾಗಿ ಮಾಡುವ ವರೆಗೂ ಅವರು ಹಾಗೆಯೇ ರೋದಿಸುತ್ತಿದ್ದರು.

فَمَا زَالَت تِّلْكَ دَعْوَىٰهُمْ حَتَّىٰ
جَعَلْنَٰهُمْ حَصِيدًا خَٰمِدِينَ ﴿١٥﴾

16. ನಾವು ಆಕಾಶವನ್ನೂ ಭೂಮಿಯನ್ನೂ ಅವುಗಳಲ್ಲಿ ಇರುವುದೆಲ್ಲವನ್ನೂ ಬರಿಯ ಲೀಲೆಗಾಗಿ ಸೃಷ್ಟಿಸಲಿಲ್ಲ.

وَمَا خَلَقْنَا ٱلسَّمَآءَ وَٱلْأَرْضَ وَمَا
بَيْنَهُمَا لَٰعِبِينَ ﴿١٦﴾

17. ನಾವು ಒಂದು ಆಟದ ವಸ್ತುವನ್ನು ತಯಾರಿಸಲಿಚ್ಛಿಸಿದ್ದರೆ ಮತ್ತು ಅಷ್ಟು ಮಾತ್ರ ನಮಗೆ ಮಾಡಲಿಕ್ಕಿರುತ್ತಿದ್ದರೆ ನಾವದನ್ನು ನಮ್ಮ ಬಳಿಯೇ ಮಾಡಿಕೊಳ್ಳುತ್ತಿದ್ದೆವು.[4]

لَوْ أَرَدْنَآ أَن نَّتَّخِذَ لَهْوًا لَّٱتَّخَذْنَٰهُ
مِن لَّدُنَّآ إِن كُنَّا فَٰعِلِينَ ﴿١٧﴾

18. ಆದರೆ ನಾವಂತು ಮಿಥ್ಯದ ಮೇಲೆ ಸತ್ಯದ ಹೊಡೆತ ಬೀಳಿಸುತ್ತೇವೆ. ಇದು ಮಿಥ್ಯದ ತಲೆಯನ್ನು ಒಡೆದು ಹಾಕುತ್ತದೆ ಮತ್ತು ಅದು ನೋಡುತ್ತಿದ್ದಂತೆಯೇ ಅಳಿದು ಹೋಗುತ್ತದೆ. ನೀವು ಸೃಷ್ಟಿಸುವ ಮಾತುಗಳಿಂದಾಗಿಯೇ (ನಿಮಗೆ) ವಿನಾಶ ಕಾದಿದೆ.

بَلْ نَقْذِفُ بِٱلْحَقِّ عَلَى ٱلْبَٰطِلِ
فَيَدْمَغُهُۥ فَإِذَا هُوَ زَاهِقٌ ۚ وَلَكُمُ
ٱلْوَيْلُ مِمَّا تَصِفُونَ ﴿١٨﴾

19. ಆಕಾಶದಲ್ಲೂ ಭೂಮಿಯಲ್ಲೂ ಇರುವ ಸೃಷ್ಟಿಗಳೆಲ್ಲವೂ ಅಲ್ಲಾಹನವು ಮತ್ತು ಅವನ ಬಳಿಯಲ್ಲಿರುವವರು (ದೇವಚರರು) ತಾವು ದೊಡ್ಡವರೆಂದೆಣಿಸಿ ಅವನ ದಾಸ್ಯ-ಆರಾಧನೆಯಿಂದ ವಿಮುಖರಾಗುವುದೂ ಇಲ್ಲ ಬಳಲುವುದೂ ಇಲ್ಲ.[5]

وَلَهُۥ مَن فِى ٱلسَّمَٰوَٰتِ وَٱلْأَرْضِ ۚ
وَمَنْ عِندَهُۥ لَا يَسْتَكْبِرُونَ عَنْ
عِبَادَتِهِۦ وَلَا يَسْتَحْسِرُونَ ﴿١٩﴾

3. ಇದಕ್ಕೆ ಅನೇಕ ಅರ್ಥಗಳಿರಲು ಸಾಧ್ಯವಿದೆ ಉದಾ: ನಾಳೆ ಯಾರಾದರೂ ಯಾತನೆಯ ಸ್ವರೂಪ ಹೇಗಿತ್ತೆಂದು ಕೇಳಿದರೆ ಹೇಳಲಿಕ್ಕಾಗಿ ಆ ಯಾತನೆಯನ್ನು ಚೆನ್ನಾಗಿ ಪರಿಶೀಲಿಸಿರಿ. ತಮ್ಮ ವೈಭವೋಪೇತವಾದ ಸಭೆಗಳನ್ನು ಮತ್ತೆ ಜರಗಿಸಿರಿ. ಪ್ರಾಯಶಃ ಈಗಲೂ ನಿಮ್ಮ ನೌಕರ ಚಾಕರರು ಬಂದು ಕೈ ಕಟ್ಟಿ, 'ಏನಪ್ಪಣೆ' ಎಂದು ಕೇಳಲೂಬಹುದು. ನಿಮ್ಮ ಅದೇ ಸಮಿತಿಗಳನ್ನು ಸಮಾವೇಶಗೊಳಿಸಿರಿ. ಪ್ರಾಯಶಃ ಈಗಲೂ ನಿಮ್ಮ ವಿವೇಕಪೂರ್ಣ ಸಲಹೆಗಳಿಂದ ಪ್ರಯೋಜನ ಪಡೆಯಲು ಜಗತ್ತು ಸಿದ್ಧವಿರಬಹುದು.

4. ಅರ್ಥಾತ್- ಆಟವಾಡಲಿಕ್ಕಿದ್ದರೆ ನಾವು ಆಟಿಕೆಗಳನ್ನು ಸಿದ್ಧಪಡಿಸಿ ಸ್ವತಃ ಆಡಿಕೊಳ್ಳುತ್ತಿದ್ದೆವು. ಅದಕ್ಕಾಗಿ ನಾವು ನಿರರ್ಥಕವಾಗಿ ಪ್ರಜ್ಞೆ, ವಿವೇಕ ಮತ್ತು ಜವಾಬ್ದಾರಿ ಇರುವ ಒಂದು ಸೃಷ್ಟಿಯನ್ನು ಸೃಷ್ಟಿಸಿ ಅವರ ನಡುವೆ ಸತ್ಯ-ಮಿಥ್ಯದ ಈ ಸಂಘರ್ಷ ಮತ್ತು ಹಗ್ಗಜಗ್ಗಾಟವನ್ನು ಏರ್ಪಡಿಸುವ ಅಕ್ರಮವೆಸಗುತ್ತಿರಲಿಲ್ಲ. ನಮ್ಮ ವಿನೋದ ಮತ್ತು ವಿಹಾರಕ್ಕಾಗಿ ಸಜ್ಜನ ದಾಸರನ್ನು ನಾವು ವಿನಾ ಕಾರಣ ಸಂಕಷ್ಟಕ್ರೀಡು ಮಾಡುತ್ತಿರಲಿಲ್ಲ.

5. ಅರ್ಥಾತ್- ದೇವನದಾಸ್ಯ ಕೈಗೊಳ್ಳುವುದು ಅವರ ಪಾಲಿಗೆ ಅಪ್ರಿಯ ಕಾರ್ಯವಲ್ಲ. ಆದ್ದರಿಂದ ಅವರು ಒಲ್ಲದ ಮನಸ್ಸಿನಿಂದ ದಾಸ್ಯ ಕೈಗೊಂಡು ದುಃಖಿತರಾಗುವುದಿಲ್ಲ. ದೇವಾದೇಶಗಳನ್ನು ಪಾಲಿಸುವುದರಲ್ಲಿ ಅವರು ದಣಿಯುವುದೂ ಇಲ್ಲ.

20. ಹಗಲೂ ಇರುಳೂ ಅವನ ಕೀರ್ತನೆ ಮಾಡುತ್ತಿರುತ್ತಾರೆ; ವಿಶ್ರಮಿಸುವುದಿಲ್ಲ.

يُسَبِّحُونَ الَّيْلَ وَالنَّهَارَ لَا يَفْتُرُونَ ﴿٢٠﴾

21. ಇವರು ಈ ಭೂಮಿಯಿಂದ ಮಾಡಿದಂತಹ ದೇವರುಗಳು (ನಿರ್ಜೀವಿಗಳಿಗೆ ಜೀವದಾನ ಮಾಡಿ) ಎಬ್ಬಿಸಿ ನಿಲ್ಲಿಸಬಲ್ಲರೇ?

أَمِ اتَّخَذُوا آلِهَةً مِّنَ الْأَرْضِ هُمْ يُنشِرُونَ ﴿٢١﴾

22. ಭೂಮಿ-ಆಕಾಶಗಳಲ್ಲಿ ಏಕೈಕ ಅಲ್ಲಾಹನ ಹೊರತು ಇತರ ದೇವರುಗಳೂ ಇರುತ್ತಿದ್ದರೆ (ಭೂಮಿ ಮತ್ತು ಆಕಾಶ) ಇವೆರಡರ ವ್ಯವಸ್ಥೆಯೂ ಕೆಟ್ಟು ಹೋಗುತ್ತಿತ್ತು. ಆದುದರಿಂದ 'ವಿಶ್ವ ಸಿಂಹಾಸನ'ದ ಪ್ರಭುವಾಗಿರುವ ಅಲ್ಲಾಹನು ಇವರು ಹೊರಿಸುವ ಆರೋಪಗಳಿಂದ ಪರಿಶುದ್ಧನಾಗಿರುತ್ತಾನೆ.

لَوْ كَانَ فِيهِمَا آلِهَةٌ إِلَّا اللَّهُ لَفَسَدَتَا ۚ فَسُبْحَانَ اللَّهِ رَبِّ الْعَرْشِ عَمَّا يَصِفُونَ ﴿٢٢﴾

23. ಅವನು ತನ್ನ ಕಾರ್ಯಗಳಿಗಾಗಿ (ಯಾರ ಮುಂದೆಯೂ) ಪ್ರಶ್ನಿಸಲ್ಪಡುವವನಲ್ಲ. ಉಳಿದವರೆಲ್ಲರೂ ಪ್ರಶ್ನಿಸಲ್ಪಡುವವರು.

لَا يُسْأَلُ عَمَّا يَفْعَلُ وَهُمْ يُسْأَلُونَ ﴿٢٣﴾

24. ಇವರು ಅವನನ್ನು ಬಿಟ್ಟು ಇತರ ದೇವರುಗಳನ್ನು ಮಾಡಿಕೊಂಡಿದ್ದಾರೆಯೇ? ಪೈಗಂಬರರೇ, ಇವರೊಡನೆ ಹೇಳಿರಿ; "ನಿಮ್ಮ ಪುರಾವೆಯನ್ನು ತನ್ನಿರಿ. ನನ್ನ ಕಾಲದವರಿಗೆ ಬೋಧನೆಯಾಗಿರುವ ಈ ಗ್ರಂಥವೂ ಇದೆ. ನನಗಿಂತ ಮುಂಚಿನವರಿಗೆ ಬೋಧನೆಯಾಗಿದ್ದ ಆ ಗ್ರಂಥಗಳೂ ಇವೆ." ಆದರೆ ಇವರಲ್ಲಿ ಹೆಚ್ಚಿನವರಿಗೆ ವಸ್ತುಸ್ಥಿತಿಯ ಅರಿವಿಲ್ಲ. ಆದುದರಿಂದ ವಿಮುಖರಾಗಿದ್ದಾರೆ.

أَمِ اتَّخَذُوا مِن دُونِهِ آلِهَةً ۖ قُلْ هَاتُوا بُرْهَانَكُمْ ۖ هَٰذَا ذِكْرُ مَن مَّعِيَ وَذِكْرُ مَن قَبْلِي ۗ بَلْ أَكْثَرُهُمْ لَا يَعْلَمُونَ الْحَقَّ ۖ فَهُم مُّعْرِضُونَ ﴿٢٤﴾

25. ನಾವು ನಿಮಗಿಂತ ಮುಂಚೆ ಕಳುಹಿಸಿದ ಪ್ರತಿಯೊಬ್ಬ ಸಂದೇಶವಾಹಕರಿಗೂ, "ನನ್ನ ಹೊರತು ಅನ್ಯ ದೇವರಿಲ್ಲ. ಆದ್ದರಿಂದ ನೀವು ನನ್ನ ದಾಸ್ಯ-ಆರಾಧನೆಯನ್ನೇ ಮಾಡಿರಿ" ಎಂದು 'ದಿವ್ಯವಾಣಿ' ಮಾಡಿದ್ದೆವು.

وَمَا أَرْسَلْنَا مِن قَبْلِكَ مِن رَّسُولٍ إِلَّا نُوحِي إِلَيْهِ أَنَّهُ لَا إِلَٰهَ إِلَّا أَنَا فَاعْبُدُونِ ﴿٢٥﴾

26. ರಹ್ಮಾನನಿಗೆ ಮಕ್ಕಳಿದ್ದಾರೆಂದು ಇವರು ಹೇಳುತ್ತಾರೆ. 'ಅಲ್ಲಾಹನು ಪರಮ ಪಾವನನು' ಅವರಂತು (ದೇವಚರರಂತು) ಸನ್ಮಾನಿತ ದಾಸರಾಗಿರುತ್ತಾರೆ.

وَقَالُوا اتَّخَذَ الرَّحْمَٰنُ وَلَدًا ۗ سُبْحَانَهُ ۚ بَلْ عِبَادٌ مُّكْرَمُونَ ﴿٢٦﴾

27. ಅವರು ಅವನಿಗೆದುರು ಮಾತಾಡಲಾರರು ಮತ್ತು ಅವನ ಅಪ್ಪಣೆಯಂತೆ ಕಾರ್ಯವೆಸಗುತ್ತಾರೆ.

لَا يَسْبِقُونَهُ بِالْقَوْلِ وَهُم بِأَمْرِهِ يَعْمَلُونَ ﴿٢٧﴾

28. ಅವರ ಮುಂದಿರುವುದನ್ನೂ ಅವರಿಗೆ ಮರೆಯಾಗಿರುವುದನ್ನೂ ಅವನು ಬಲ್ಲನು. ಯಾರ ಪರವಾಗಿ ಶಿಫಾರಸನ್ನು ಕೇಳಲು

يَعْلَمُ مَا بَيْنَ أَيْدِيهِمْ وَمَا خَلْفَهُمْ وَلَا يَشْفَعُونَ إِلَّا لِمَنِ ارْتَضَىٰ

ಅಲ್ಲಾಹನು ಸಮ್ಮತಿಸುವನೋ ಅವನ ಹೊರತು ಯಾರ ಬಗ್ಗೆಯೂ ಅವರು ಶಿಫಾರಸು ಮಾಡುವುದಿಲ್ಲ ಮತ್ತು ಅವರು ಅವನ ಭಯದಿಂದ ಭೀತರಾಗಿರುತ್ತಾರೆ.

وَهُمْ مِّنْ خَشْيَتِهٖ مُشْفِقُوْنَ ﴿٢٨﴾

29. ಅಲ್ಲಾಹನ ಹೊರತು ನಾನೂ ಒಬ್ಬ ದೇವನೆಂದು ಅವರ ಪೈಕಿ ಯಾರಾದರೂ ಹೇಳಿಬಿಟ್ಟನೆಂದರೆ ಅವನಿಗೆ ನಾವು ನರಕಾಗ್ನಿಯ ಶಿಕ್ಷೆ ಕೊಡುವೆವು. ನಮ್ಮಲ್ಲಿ ಅಕ್ರಮಿಗಳಿಗೆ ಇದೇ ಪ್ರತಿಫಲವಿದೆ.

وَمَنْ يَّقُلْ مِنْهُمْ اِنِّىْۤ اِلٰـهٌ مِّنْ
دُوْنِهٖ فَذٰلِكَ نَجْزِيْهِ جَهَنَّمَ ؕ
كَذٰلِكَ نَجْزِى الظّٰلِمِيْنَ ﴿٢٩﴾

30. (ಪ್ರವಾದಿಯ ಮಾತನ್ನು ಪಾಲಿಸಲು) ನಿರಾಕರಿಸಿದವರು, ಆಕಾಶಗಳೂ ಭೂಮಿಯೂ ಕೂಡಿ ಕೊಂಡಿದ್ದು ಅನಂತರ ನಾವು ಅವುಗಳನ್ನು ಬೇರ್ಪಡಿಸಿದ್ದನ್ನೂ ಪ್ರತಿಯೊಂದು ಜೀವಿಯನ್ನೂ ನೀರಿನಿಂದ ಸೃಷ್ಟಿಸಿದ್ದನ್ನೂ ಕಾಣಲಿಲ್ಲವೇ? ಅವರು (ನಮ್ಮ ಸೃಷ್ಟಿಕರ್ತೃತ್ವದ ಮೇಲೆ) ವಿಶ್ವಾಸವಿರಿಸುವುದಿಲ್ಲವೇ?

اَوَلَمْ يَرَ الَّذِيْنَ كَفَرُوْۤا اَنَّ السَّمٰوٰتِ
وَالْاَرْضَ كَانَتَا رَتْقًا فَفَتَقْنٰهُمَا ؕ
وَجَعَلْنَا مِنَ الْمَآءِ كُلَّ شَىْءٍ حَىٍّ ؕ
اَفَلَا يُؤْمِنُوْنَ ﴿٣٠﴾

31. ನಾವು ಭೂಮಿಯಲ್ಲಿ ಪರ್ವತಗಳನ್ನು ನಾಟಿ ಅದು ಇವರೊಂದಿಗೆ ಉರುಳಿ ಬಿಡದಂತೆ ಮಾಡಿದೆವು ಮತ್ತು ಜನರು ತಮ್ಮ ದಾರಿಯನ್ನು ಕಂಡುಕೊಳ್ಳುವಂತಾಗಲು ಅದರಲ್ಲಿ ವಿಶಾಲವಾದ ಮಾರ್ಗಗಳನ್ನು ಮಾಡಿದೆವು.

وَجَعَلْنَا فِى الْاَرْضِ رَوَاسِىَ اَنْ
تَمِيْدَ بِهِمْ ۖ وَجَعَلْنَا فِيْهَا فِجَاجًا
سُبُلًا لَّعَلَّهُمْ يَهْتَدُوْنَ ﴿٣١﴾

32. ನಾವು ಆಕಾಶವನ್ನು ಒಂದು ಭದ್ರ ಮೇಲು ಛಾವಣಿಯನ್ನಾಗಿ ಮಾಡಿದೆವು. ಆದರೆ ಇವರಾದರೋ ವಿಶ್ವದ ನಿದರ್ಶನಗಳ ಕಡೆಗೆ ಗಮನಿಸುವುದೇ ಇಲ್ಲ.

وَجَعَلْنَا السَّمَآءَ سَقْفًا مَّحْفُوْظًا ۖۚ
وَّهُمْ عَنْ اٰيٰتِهَا مُعْرِضُوْنَ ﴿٣٢﴾

33. ರಾತ್ರಿ ಹಗಲುಗಳನ್ನು ಉಂಟು ಮಾಡಿದವನೂ ಸೂರ್ಯ-ಚಂದ್ರನನ್ನು ಸೃಷ್ಟಿಸಿದವನೂ ಅಲ್ಲಾಹನೇ. ಎಲ್ಲವೂ ಒಂದೊಂದು ಕಕ್ಷೆಯಲ್ಲಿ(ಫಲಕ್‌ನಲ್ಲಿ) ತೇಲುತ್ತಿವೆ.[6]

وَهُوَ الَّذِىْ خَلَقَ الَّيْلَ وَالنَّهَارَ
وَالشَّمْسَ وَالْقَمَرَ ؕ كُلٌّ فِىْ
فَلَكٍ يَّسْبَحُوْنَ ﴿٣٣﴾

34. ಪೈಗಂಬರರೇ, ನಾವು ಅಮರತ್ವವನ್ನು ನಿಮಗಿಂತ ಮುಂಚೆಯೂ ಯಾವ ಮನುಷ್ಯನಿಗೂ ನೀಡಲಿಲ್ಲ. ನೀವು ಮರಣ ಹೊಂದಿದರೆ ಇವರೇನು ಶಾಶ್ವತವಾಗಿ ಬದುಕಿರುವರೇ?

وَمَا جَعَلْنَا لِبَشَرٍ مِّنْ قَبْلِكَ الْخُلْدَ ؕ
اَفَا۟ئِنْ مِّتَّ فَهُمُ الْخٰلِدُوْنَ ﴿٣٤﴾

6. 'ಫಲಕ್' ಎಂಬ ಪದವು ಫಾರ್ಸಿಯ 'ಚರಖ್' ಅಥವಾ 'ಗರ್ದೂಂ' ಎಂಬ ಪದಕ್ಕೆ ಸಮಾನಾರ್ಥವಾಗಿದೆ. ಇದು ಅರಬಿಯಲ್ಲಿ ಆಕಾಶಕ್ಕೆ ಬಳಸುವ ಚಿರಪರಿಚಿತ ಪದಗಳಲ್ಲೊಂದಾಗಿದೆ. "ಎಲ್ಲವೂ ಒಂದೊಂದು 'ಫಲಕ್'ನಲ್ಲಿ ತೇಲುತ್ತಿವೆ" ಎಂಬುದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ ಈ ನಕ್ಷತ್ರಗಳೆಲ್ಲಾ ಒಂದೇ 'ಫಲಕ್'ನಲ್ಲಿಲ್ಲ. ಬದಲಾಗಿ ಪ್ರತಿಯೊಂದಕ್ಕೂ ವಿಭಿನ್ನ 'ಫಲಕ್'ಗಳಿವೆ. ಎರಡನೆಯದಾಗಿ 'ಫಲಕ್' ಎಂದರೆ ನಕ್ಷತ್ರಗಳು ಮೊಳೆಗಳಂತೆ ಲಗತ್ತಿಸಲ್ಪಟ್ಟು ಅದರ ಜತೆಗೆ ತಿರುಗುತ್ತಿರುವಂತಹ ವಸ್ತುವಲ್ಲ. ಅದು ತೇಲುವ ಅಥವಾ ಅಂತರಿಕ್ಷ ಯಾ ಶೂನ್ಯದ ಸ್ವರೂಪದ ವಸ್ತುವಾಗಿದೆ. ಇದರಲ್ಲಿ ಈ ನಕ್ಷತ್ರಗಳ ಚಲನೆ ತೇಲುವುದನ್ನು ಹೋಲುತ್ತದೆ.

35. ಪ್ರತಿಯೊಂದು ಜೀವಿಗೂ ಮರಣದ ಸವಿಯನ್ನು ಅನುಭವಿಸಲಿಕ್ಕಿದೆ ಮತ್ತು ನಾವು ನಿಮ್ಮೆಲ್ಲರನ್ನೂ ಸುಸ್ಥಿತಿ-ದುಸ್ಥಿತಿಗಳಲ್ಲಿಟ್ಟು ಪರೀಕ್ಷಿಸುತ್ತಿದ್ದೇವೆ, ಕೊನೆಗೆ ನೀವು ನಮ್ಮ ಕಡೆಗೇ ಮರಳಲಿದ್ದೀರಿ.

كُلُّ نَفْسٍ ذَآئِقَةُ الْمَوْتِ ۗ وَنَبْلُوكُم بِالشَّرِّ وَالْخَيْرِ فِتْنَةً ۖ وَإِلَيْنَا تُرْجَعُونَ ٣٥

36. ಈ ಸತ್ಯನಿಷೇಧಿಗಳು ನಿಮ್ಮನ್ನು ಕಂಡಾಗಲೆಲ್ಲಾ ಅಪಹಾಸ್ಯ ಮಾಡದೇ ಬಿಡುವುದಿಲ್ಲ. ನಿಮ್ಮ ದೇವರುಗಳ ಪ್ರಸ್ತಾಪವೆತ್ತುತ್ತಿರುವವನು ಇವನೇ ತಾನೆ?" ಎಂದು ಕೇಳುತ್ತಾರೆ. ಅವರಂತು ರಹ್ಮಾನನ ಪ್ರಸ್ತಾಪವನ್ನು ತಿರಸ್ಕರಿಸುವವರಾಗಿದ್ದಾರೆ.

وَإِذَا رَآكَ الَّذِينَ كَفَرُوا إِن يَتَّخِذُونَكَ إِلَّا هُزُوًا أَهَٰذَا الَّذِي يَذْكُرُ آلِهَتَكُمْ وَهُم بِذِكْرِ الرَّحْمَٰنِ هُمْ كَافِرُونَ ٣٦

37. ಮಾನವನು ದುಡುಕು ಸ್ವಭಾವದ ಸೃಷ್ಟಿ. ನಾನೀಗಲೇ ನಿಮಗೆ ನನ್ನ ನಿದರ್ಶನಗಳನ್ನು ತೋರಿಸಿ ಕೊಡುತ್ತೇನೆ. ನನ್ನೊಡನೆ ದುಡುಕಬೇಡಿರಿ.

خُلِقَ الْإِنسَانُ مِنْ عَجَلٍ ۚ سَأُرِيكُمْ آيَاتِي فَلَا تَسْتَعْجِلُونِ ٣٧

38. "ನೀವು ಸತ್ಯವಾದಿಯಾಗಿದ್ದರೆ ಈ ಬೆದರಿಕೆಯು ಈಡೇರುವುದು ಯಾವಾಗ?" ಎಂದು ಇವರು ಕೇಳುತ್ತಾರೆ.

وَيَقُولُونَ مَتَىٰ هَٰذَا الْوَعْدُ إِن كُنتُمْ صَادِقِينَ ٣٨

39. ಈ ಸತ್ಯನಿಷೇಧಿಗಳು ತಮ್ಮ ಮುಖಗಳನ್ನಾಗಲಿ ತಮ್ಮ ಬೆನ್ನುಗಳನ್ನಾಗಲಿ ಅಗ್ನಿಯಿಂದ ರಕ್ಷಿಸಿಕೊಳ್ಳಲಾರದಂತಹ ಹಾಗೂ ಇವರಿಗೆ ಎಲ್ಲಿಂದಲೂ ಸಹಾಯ ಒದಗದಂತಹ ಸಂದರ್ಭದ ಬಗ್ಗೆ ಅರಿಯುತ್ತಿದ್ದರೆ!

لَوْ يَعْلَمُ الَّذِينَ كَفَرُوا حِينَ لَا يَكُفُّونَ عَن وُجُوهِهِمُ النَّارَ وَلَا عَن ظُهُورِهِمْ وَلَا هُمْ يُنصَرُونَ ٣٩

40. ಆ ವಿಪತ್ತು ಹಠಾತ್ತನೆ ಬಂದು ಬಿಡುವುದು ಮತ್ತು ಅದು ಇವರನ್ನು ಥಟ್ಟನೆ ಹೇಗೆ ಆವರಿಸಿ ಗಾಬರಿಗೊಳಿಸುವುದೆಂದರೆ, ಇವರಿಗೆ ಅದನ್ನು ನಿವಾರಿಸಲಿಕ್ಕೂ ಸಾಧ್ಯವಾಗದು ಮತ್ತು ಕ್ಷಣ ಮಾತ್ರದ ಸಮಯಾವಕಾಶವೂ ಸಿಗಲಾರದು.

بَلْ تَأْتِيهِم بَغْتَةً فَتَبْهَتُهُمْ فَلَا يَسْتَطِيعُونَ رَدَّهَا وَلَا هُمْ يُنظَرُونَ ٤٠

41. ನಿಮಗಿಂತ ಮುಂಚೆಯೂ ಸಂದೇಶವಾಹಕರನ್ನು ಅಪಹಾಸ್ಯ ಮಾಡಲಾಗಿದೆ. ಆದರೆ ಅವರನ್ನು ಗೇಲಿ ಮಾಡಿದವರು ತಾವು ಅಪಹಾಸ್ಯ ಮಾಡುತ್ತಿದ್ದುದರ ಸುಳಿಯಲ್ಲೇ ಸಿಕ್ಕಿ ಹೋದರು.

وَلَقَدِ اسْتُهْزِئَ بِرُسُلٍ مِّن قَبْلِكَ فَحَاقَ بِالَّذِينَ سَخِرُوا مِنْهُم مَّا كَانُوا بِهِ يَسْتَهْزِئُونَ ٤١

ربع

42. ಪೈಗಂಬರರೇ, ನಿಮ್ಮನ್ನು ಹಗಲೂ ರಾತ್ರಿಯೂ ರಹ್ಮಾನನಿಂದ ರಕ್ಷಿಸುವವನು ಯಾರಿದ್ದಾನೆಂದು ಇವರನ್ನು ಕೇಳಿರಿ. ಆದರೆ ಇವರು ತಮ್ಮ ಪ್ರಭುವಿನ ಉಪದೇಶದಿಂದ ವಿಮುಖರಾಗುತ್ತಿದ್ದಾರೆ.

قُلْ مَن يَكْلَؤُكُم بِاللَّيْلِ وَالنَّهَارِ مِنَ الرَّحْمَٰنِ ۗ بَلْ هُمْ عَن ذِكْرِ رَبِّهِم مُّعْرِضُونَ ٤٢

43. ನಮ್ಮ ವಿರುದ್ಧ ಇವರನ್ನು ಬೆಂಬಲಿಸುವಂತಹ ದೇವರು ಯಾರಾದರೂ ಇವರಿಗೆ ಇದ್ದಾರೆಯೇ? ಆ ದೇವರುಗಳು ಸ್ವಯಂ ತಮಗೇ ಸಹಾಯ ಮಾಡಿಕೊಳ್ಳಲಾರರು ಮತ್ತು ನಮ್ಮ ಸಮರ್ಥನೆಯೂ ಅವರಿಗಿಲ್ಲ.

أَمْ لَهُمْ آلِهَةٌ تَمْنَعُهُم مِّن دُونِنَا ۚ
لَا يَسْتَطِيعُونَ نَصْرَ أَنفُسِهِمْ وَلَا هُم
مِّنَّا يُصْحَبُونَ ﴿٤٣﴾

44. ವಾಸ್ತವದಲ್ಲಿ ನಾವು ಇವರಿಗೂ ಇವರ ಪೂರ್ವಜರಿಗೂ ಜೀವನ ಸಾಧನಗಳನ್ನು ಕೊಡುತ್ತಾ ಹೋದೆವು. ಹೀಗೆ ಅವರ ಜೀವನಾವಧಿ ದೀರ್ಘವಾಯಿತು. ಆದರೆ ನಾವು ಭೂಮಿಯನ್ನು ಅದರ ವಿವಿಧ ದಿಸೆಗಳಿಂದ ಕಡಿತಗೊಳಿಸುತ್ತ ಬರುತ್ತಿರುವುದು ಇವರಿಗೆ ತೋರುವುದಿಲ್ಲವೇ?[7] ಹೀಗಿರುವಾಗ ಇವರು ಮೇಲುಗೈ ಸಾಧಿಸುವರೇ?

بَلْ مَتَّعْنَا هَٰؤُلَاءِ وَآبَاءَهُمْ حَتَّىٰ
طَالَ عَلَيْهِمُ الْعُمُرُ ۗ أَفَلَا يَرَوْنَ
أَنَّا نَأْتِي الْأَرْضَ نَنقُصُهَا مِنْ
أَطْرَافِهَا ۚ أَفَهُمُ الْغَالِبُونَ ﴿٤٤﴾

45. ನಾನಂತು 'ದಿವ್ಯವಾಣಿ'ಯ ಆಧಾರದಲ್ಲಿ ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆಂದು ಇವರೊಡನೆ ಹೇಳಿರಿ. ಆದರೆ ಕಿವುಡರಿಗೆ ಎಷ್ಟು ಎಚ್ಚರಿಸಿದರೂ ಅವರು ಕರೆಯನ್ನು ಕೇಳುವುದಿಲ್ಲ.

قُلْ إِنَّمَا أُنذِرُكُم بِالْوَحْيِ ۚ وَلَا
يَسْمَعُ الصُّمُّ الدُّعَاءَ إِذَا مَا
يُنذَرُونَ ﴿٤٥﴾

46. ನಿನ್ನ ಪ್ರಭುವಿನ ಯಾತನೆಯು ಇವರಿಗೆ ಕಿಂಚಿತ್ತಾದರೂ ಸೋಂಕಿಬಿಟ್ಟರೆ. "ಅಯ್ಯೋ ನಮ್ಮ ದುರದೃಷ್ಟವೇ! ನಿಜಕ್ಕೂ ನಾವು ಅಪರಾಧಿಗಳೇ ಆಗಿದ್ದೆವು" ಎಂದು ಚೀತ್ಕರಿಸುವರು.

وَلَئِن مَّسَّتْهُمْ نَفْحَةٌ مِّنْ عَذَابِ
رَبِّكَ لَيَقُولُنَّ يَا وَيْلَنَا إِنَّا كُنَّا ظَالِمِينَ ﴿٤٦﴾

47. ಪುನರುತ್ಥಾನ ದಿನ ನಾವು ನಿಖರವಾಗಿ ತೂಗುವ ತಕ್ಕಡಿಯನ್ನಿಟ್ಟು ಬಿಡುವೆವು. ಅನಂತರ ಯಾರ ಮೇಲೂ ಸ್ವಲ್ಪವೂ ಅಕ್ರಮವಾಗದು. ಯಾರಾದರೂ ಸಾಸಿವೆ ಕಾಳಿನಷ್ಟಾದರೂ ಏನಾದರೂ ಮಾಡಿದ್ದರೆ ನಾವು ಅದನ್ನು ಮುಂದೆ ತರುವೆವು ಮತ್ತು ಲೆಕ್ಕ ಪರಿಶೋಧನೆಗೆ ನಾವೇ ಸಾಕು.

وَنَضَعُ الْمَوَازِينَ الْقِسْطَ لِيَوْمِ الْقِيَامَةِ
فَلَا تُظْلَمُ نَفْسٌ شَيْئًا ۖ وَإِن كَانَ
مِثْقَالَ حَبَّةٍ مِّنْ خَرْدَلٍ أَتَيْنَا بِهَا ۗ
وَكَفَىٰ بِنَا حَاسِبِينَ ﴿٤٧﴾

48-49. ಈ ಮುಂಚೆ ನಾವು ಮೂಸಾ ಮತ್ತು ಹಾರೂನರಿಗೆ 'ಸತ್ಯ ಅಸತ್ಯಗಳ ಮಾನದಂಡ' ಪ್ರಕಾಶ ಮತ್ತು (ದಿಕ್ರ್) ಬೋಧನೆಗಳನ್ನು, ತಮ್ಮ ಪ್ರಭುವನ್ನು ಪ್ರತ್ಯಕ್ಷವಾಗಿ ನೋಡದೆಯೇ ಭಯಪಡುವ ಹಾಗೂ (ವಿಚಾರಣೆಯ) ಆ ಘಳಿಗೆಯ ಬಗ್ಗೆ ಸದಾ ಭೀತರಾಗಿರುವ 'ಧರ್ಮನಿಷ್ಠ'ರ ಶ್ರೇಯಸ್ಸಿಗಾಗಿ ನೀಡಿದ್ದೆವು-

وَلَقَدْ آتَيْنَا مُوسَىٰ وَهَارُونَ الْفُرْقَانَ
وَضِيَاءً وَذِكْرًا لِّلْمُتَّقِينَ ﴿٤٨﴾
الَّذِينَ يَخْشَوْنَ رَبَّهُم بِالْغَيْبِ
وَهُم مِّنَ السَّاعَةِ مُشْفِقُونَ ﴿٤٩﴾

7. ಅರ್ಥಾತ್- ಭೂಮಿಯಲ್ಲಿ ಬರ, ಸಾಂಕ್ರಾಮಿಕ ರೋಗ, ನೆರೆ, ಭೂಕಂಪ, ತೀವ್ರ ಚಳಿ ಅಥವಾ ಸುಡುಬಿಸಿಲು ಇತ್ಯಾದಿಗಳ ರೂಪದಲ್ಲಿ ನಮ್ಮ ಪ್ರಬಲಶಕ್ತಿಯ ಕೌಶಲ್ಯದ ಕುರುಹುಗಳು ಬಹಿರಂಗವಾಗಿ ಕಾಣಿಸುತ್ತಿರುತ್ತವೆ. ಅದು ಮಾನವನ ಸಾಧನೆಗಳನ್ನೆಲ್ಲಾ ಮಣ್ಣುಗೂಡಿಸಿ ಬಿಡುತ್ತದೆ. ಸಾವಿರಾರು ಅಥವಾ ಲಕ್ಷಗಟ್ಟಲೆ ಜನರು ಸಾಯುತ್ತಾರೆ. ಜನವಾಸ ಪ್ರದೇಶಗಳು ನಾಶ ಹೊಂದುತ್ತವೆ. ಬೆಳೆದು ನಿಂತಿರುವ ತೆನೆಯುವ ಗದ್ದೆಗಳು ಸೂರೆಗೊಳ್ಳುತ್ತವೆ. ಉತ್ಪನ್ನದಲ್ಲಿ ಕೊರತೆಯುಂಟಾಗುತ್ತದೆ. ವ್ಯಾಪಾರ ಸ್ಥಗಿತಗೊಳ್ಳುತ್ತದೆ. ಒಟ್ಟಿನಲ್ಲಿ ಮಾನವ ಜೀವನದ ಸಂಪನ್ಮೂಲಗಳಲ್ಲಿ ಒಂದಲ್ಲೊಂದು ಮಾರ್ಗದಿಂದ ಕಡಿತ ಉಂಟಾಗುತ್ತಲೇ ಇರುತ್ತದೆ. ಮಾನವ ತನ್ನೆಲ್ಲಾ ಪ್ರಯತ್ನಗಳ ಹೊರತಾಗಿಯೂ ಈ ನಷ್ಟಗಳನ್ನು ತಡೆಯುವಲ್ಲಿ ವಿಫಲನಾಗುತ್ತಾನೆ.

50. ಮತ್ತು ಈಗ ನಾವು ಈ ಶುಭಕರ 'ಬೋಧನೆ'ಯನ್ನು (ನಿಮಗಾಗಿ) ಅವತೀರ್ಣಗೊಳಿಸಿರುವೆವು. ನೀವೇನು ಇದನ್ನು ನಿರಾಕರಿಸುವವರಾಗುತ್ತೀರಾ?

وَهٰذَا ذِكْرٌ مُّبٰرَكٌ اَنْزَلْنٰهُ ؕ اَفَاَنْتُمْ
لَهٗ مُنْكِرُوْنَ ۝٥٠

51. ಅದಕ್ಕಿಂತಲೂ ಮುಂಚೆ ನಾವು ಇಬ್‌ರಾಹೀಮರಿಗೆ ಅವರ ವಿವೇಕವನ್ನು ದಯಪಾಲಿಸಿದ್ದೆವು ಮತ್ತು ನಾವು ಅವರನ್ನು ಚೆನ್ನಾಗಿ ಅರಿತಿದ್ದೆವು.

وَلَقَدْ اٰتَيْنَآ اِبْرٰهِيْمَ رُشْدَهٗ مِنْ
قَبْلُ وَكُنَّا بِهٖ عٰلِمِيْنَ ۝٥١

52. ಅವರು ತಮ್ಮ ತಂದೆ ಹಾಗೂ ತಮ್ಮ ಜನಾಂಗದೊಡನೆ, "ನೀವು ಮಾರು ಹೋಗುತ್ತಿರುವ ಈ ವಿಗ್ರಹಗಳು ಎಂತಹವು?" ಎಂದು ಕೇಳಿದ್ದ ಸಂದರ್ಭವನ್ನು ಸ್ಮರಿಸಿರಿ.

اِذْ قَالَ لِاَبِيْهِ وَقَوْمِهٖ مَا هٰذِهِ
التَّمَاثِيْلُ الَّتِيْٓ اَنْتُمْ لَهَا عٰكِفُوْنَ ۝٥٢

53. ಆಗ ಅವರು, "ನಮ್ಮ ಪೂರ್ವಜರು ಇವುಗಳನ್ನು ಪೂಜಿಸುತ್ತಿರುವುದನ್ನು ನಾವು ಕಂಡಿದ್ದೇವೆ" ಎಂದು ಉತ್ತರ ಕೊಟ್ಟರು.

قَالُوْا وَجَدْنَآ اٰبَآءَنَا لَهَا عٰبِدِيْنَ ۝٥٣

54. ಇವರು, "ನೀವೂ ನಿಮ್ಮ ಪೂರ್ವಜರೂ ಸ್ಪಷ್ಟ ಪಥಭ್ರಷ್ಟತೆಗೊಳಗಾಗಿದ್ದೀರಿ" ಎಂದಾಗ-

قَالَ لَقَدْ كُنْتُمْ اَنْتُمْ وَاٰبَآؤُكُمْ
فِيْ ضَلٰلٍ مُّبِيْنٍ ۝٥٤

55. ಅವರು, "ನೀನು ನಮ್ಮ ಮುಂದೆ ನಿನ್ನ ನೈಜ ಭಾವನೆಗಳನ್ನು ಪ್ರಕಟಿಸುತ್ತಿರುವೆಯೋ ಅಥವಾ ಅಪಹಾಸ್ಯ ಮಾಡುತ್ತೀಯೋ?" ಎಂದು ಕೇಳಿದರು.

قَالُوْٓا اَجِئْتَنَا بِالْحَقِّ اَمْ اَنْتَ مِنَ
اللّٰعِبِيْنَ ۝٥٥

56. ಆಗ ಇವರು, "ಇಲ್ಲ, ವಾಸ್ತವದಲ್ಲಿ ಭೂಮಿ-ಆಕಾಶಗಳನ್ನು ಸೃಷ್ಟಿಸಿದ ಪ್ರಭುವೇ ನಿಮ್ಮ ಪ್ರಭುವಾಗಿರುವನು. ಈ ಬಗ್ಗೆ ನಾನು ನಿಮ್ಮ ಮುಂದೆ ಸಾಕ್ಷಿ ಹೇಳುತ್ತೇನೆ-

قَالَ بَلْ رَّبُّكُمْ رَبُّ السَّمٰوٰتِ
وَالْاَرْضِ الَّذِيْ فَطَرَهُنَّ ۖ وَاَنَا عَلٰى
ذٰلِكُمْ مِّنَ الشّٰهِدِيْنَ ۝٥٦

57. ಮತ್ತು ಅಲ್ಲಾಹನಾಣೆ, ನಾನು ನಿಮ್ಮ ಅನುಪಸ್ಥಿತಿಯಲ್ಲಿ ಖಂಡಿತವಾಗಿಯೂ ನಿಮ್ಮ ವಿಗ್ರಹಗಳನ್ನು ನೋಡಿ ಕೊಳ್ಳುವೆನು" ಎಂದರು.

وَتَاللّٰهِ لَاَكِيْدَنَّ اَصْنَامَكُمْ بَعْدَ
اَنْ تُوَلُّوْا مُدْبِرِيْنَ ۝٥٧

58. ಆ ಪ್ರಕಾರ ಇವರು ಅವುಗಳನ್ನು ತುಂಡು ತುಂಡಾಗಿ ಮುರಿದು ಹಾಕಿದರು ಮತ್ತು ಅದರ ಕಡೆಗೆ ಅವರು ಗಮನಹರಿಸಲೆಂದು ಅವುಗಳಲ್ಲಿ ದೊಡ್ಡದನ್ನು ಬಿಟ್ಟುಬಿಟ್ಟರು.

فَجَعَلَهُمْ جُذٰذًا اِلَّا كَبِيْرًا لَّهُمْ لَعَلَّهُمْ
اِلَيْهِ يَرْجِعُوْنَ ۝٥٨

59. (ಅವರು ಬಂದು ವಿಗ್ರಹಗಳ ಈ ದುರವಸ್ಥೆಯನ್ನು ಕಂಡು)

قَالُوْا مَنْ فَعَلَ هٰذَا بِاٰلِهَتِنَآ اِنَّهٗ

"ನಮ್ಮ ದೇವರುಗಳಿಗೆ ಈ ಗತಿ ಮಾಡಿದವನಾರು? ಅವನೊಬ್ಬ ಮಹಾ ಅಕ್ರಮಿಯಾಗಿರಬೇಕು" ಎಂದರು.	لَمِنَ الظّٰلِمِيْنَ ﴿٥٩﴾
60. ಕೆಲವರು ಹೀಗೆ ಹೇಳಿದರು; "ಓರ್ವ ತರುಣನು ಅವುಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದುದನ್ನು ನಾವು ಕೇಳಿದ್ದೆವು. ಅವನ ಹೆಸರು ಇಬ್‌ರಾಹೀಮ್ ಎಂದಾಗಿದೆ."	قَالُوْا سَمِعْنَا فَتًى يَّذْكُرُهُمْ يُقَالُ لَهٗٓ اِبْرٰهِيْمُ ﴿٦٠﴾
61. ಆಗ ಅವರು, "ಹಾಗಾದರೆ ಅವನನ್ನು ಹಿಡಿದು ಎಲ್ಲರ ಮುಂದೆ ತನ್ನಿರಿ. ಅವನನ್ನು (ಹೇಗೆ ಶಿಕ್ಷಿಸಲಾಗುತ್ತದೆಯೆಂದು) ನೋಡು ವಂತಾಗಲಿ" ಎಂದರು.	قَالُوْا فَاْتُوْا بِهٖ عَلٰٓى اَعْيُنِ النَّاسِ لَعَلَّهُمْ يَشْهَدُوْنَ ﴿٦١﴾
62. (ಇಬ್‌ರಾಹೀಮರು ಬಂದಾಗ) "ಓ ಇಬ್‌ರಾಹೀಮ್! ನಮ್ಮ ದೇವರುಗಳೊಂದಿಗೆ ಹೀಗೆ ವರ್ತಿಸಿರುವುದು ನೀನೇ?" ಎಂದು ಕೇಳಿದರು.	قَالُوْٓا ءَاَنْتَ فَعَلْتَ هٰذَا بِاٰلِهَتِنَا يٰٓاِبْرٰهِيْمُ ﴿٦٢﴾
63. ಅವರು, "ಇದನ್ನೆಲ್ಲ ಅವರ ಈ ಹಿರಿಯನು ಮಾಡಿರುತ್ತಾನೆ. ಅವು ಮಾತಾಡುವುದಿದ್ದರೆ ಅವುಗಳನ್ನೇ ಕೇಳಿಕೊಳ್ಳಿರಿ" ಎಂದರು.[8]	قَالَ بَلْ فَعَلَهٗ ۖ كَبِيْرُهُمْ هٰذَا فَسْـَٔلُوْهُمْ اِنْ كَانُوْا يَنْطِقُوْنَ ﴿٦٣﴾
64. ಇದನ್ನು ಕೇಳಿ ತಮ್ಮ ಜನರು ಅಂತಃಕರಣದ ಕಡೆಗೆ ಮರಳಿದರು ಮತ್ತು (ತಮ್ಮ ಮನಸ್ಸಿನಲ್ಲಿ) "ನಿಜಕ್ಕೂ ನೀವೇ ಅಕ್ರಮಿಗಳು" ಎನ್ನತೊಡಗಿದರು.	فَرَجَعُوْٓا اِلٰٓى اَنْفُسِهِمْ فَقَالُوْٓا اِنَّكُمْ اَنْتُمُ الظّٰلِمُوْنَ ﴿٦٤﴾
65. ಆದರೂ ಅವರು ಅಭಿಪ್ರಾಯ ಬದಲಾಯಿಸಿ, "ಇವು ಮಾತ ನಾಡುವುದಿಲ್ಲವೆಂದು ನಿನಗೆ ಗೊತ್ತಿದೆ" ಎಂದರು.	ثُمَّ نُكِسُوْا عَلٰى رُءُوْسِهِمْ ۚ لَقَدْ عَلِمْتَ مَا هٰٓؤُلَآءِ يَنْطِقُوْنَ ﴿٦٥﴾
66. ಆಗ ಇಬ್‌ರಾಹೀಮ್, "ಹಾಗಾದರೆ ನೀವು ಅಲ್ಲಾಹನನ್ನು ಬಿಟ್ಟು ನಿಮಗೆ ಲಾಭವನ್ನಾಗಲೀ ನಷ್ಟವನ್ನಾಗಲೀ ಉಂಟು ಮಾಡಲು ಶಕ್ತರಲ್ಲದವರನ್ನು ಪೂಜಿಸುತ್ತೀರಾ?	قَالَ اَفَتَعْبُدُوْنَ مِنْ دُوْنِ اللّٰهِ مَا لَا يَنْفَعُكُمْ شَيْـًٔا وَّلَا يَضُرُّكُمْ ﴿٦٦﴾
67. ಥೂ, ನಿಮಗೆ ಮತ್ತು ಅಲ್ಲಾಹನನ್ನು ಬಿಟ್ಟು ನೀವು ಪೂಜಿಸುತ್ತಿರುವ	اُفٍّ لَّكُمْ وَلِمَا تَعْبُدُوْنَ مِنْ دُوْنِ

8. ಈ ಆರಾಧ್ಯರುಗಳು ತೀರಾ ಅಸಹಾಯಕರು, ಅವರಿಂದ ಯಾವ ಕೆಲಸವನ್ನೂ ನಿರೀಕ್ಷಿಸುವಂತಿಲ್ಲ ಎಂದು ಅವರು ತಮ್ಮ ಉತ್ತರದ ಮೂಲಕ ಒಪ್ಪಿಕೊಳ್ಳಲೆಂದೇ ಹ. ಇಬ್‌ರಾಹೀಮ್(ಅ) ಈ ಮಾತನ್ನು ಹೇಳಿದ್ದರೆಂದು ಈ ಪದಗಳೇ ಸೂಚಿಸುತ್ತವೆ. ಇಂತಹ ಸಂದರ್ಭದಲ್ಲಿ ಪುರಾವೆಗಾಗಿ ಒಬ್ಬನು ಹೇಳುವಂತಹ ಅವಾಸ್ತವಿಕವಾದ ಮಾತನ್ನು ಸುಳ್ಳೆಂದು ಹೇಳುವಂತಿಲ್ಲ. ಏಕೆಂದರೆ ಅದನ್ನು ಹೇಳುವವನು ಸುಳ್ಳು ಹೇಳುವ ಇರಾದೆಯಿಂದ ಹೇಳುವುದಿಲ್ಲ. ಹಾಗೆಯೇ ಕೇಳುವವರೂ ಅದನ್ನು ಸುಳ್ಳೆಂದು ಭಾವಿಸುವುದಿಲ್ಲ. ಹೇಳುವವನು ಅದನ್ನು ತನ್ನ ನಿಲುವನ್ನು ಸಮರ್ಥಿಸಲಿಕ್ಕಾಗಿ ಹೇಳುತ್ತಾನೆ. ಕೇಳುವವನೂ ಅದನ್ನು ಅದೇ ಭಾವನೆಯೊಂದಿಗೆ ಕೇಳುತ್ತಾನೆ.

اللّٰهِ ۭ اَفَلَا تَعْقِلُوْنَ ﴿٦٧﴾

ನಿಮ್ಮ ಆರಾಧ್ಯ ವಸ್ತುಗಳಿಗೆ! ನಿಮಗೆ ಸ್ವಲ್ಪವೂ ಬುದ್ಧಿ ಇಲ್ಲವೇ?" ಎಂದರು.

قَالُوْا حَرِّقُوْهُ وَانْصُرُوْٓا اٰلِهَتَكُمْ اِنْ كُنْتُمْ فٰعِلِيْنَ ﴿٦٨﴾

68. ಆಗ ಅವರು, "ನಿಮಗೇನಾದರೂ ಮಾಡ ಬೇಕೆಂದಿದ್ದರೆ ಇವನನ್ನು ಸುಟ್ಟು ಹಾಕಿರಿ ಮತ್ತು ನಿಮ್ಮ ದೇವರುಗಳಿಗೆ ನೆರವಾಗಿರಿ" ಎಂದರು.

قُلْنَا يٰنَارُ كُوْنِيْ بَرْدًا وَّسَلٰمًا عَلٰٓي اِبْرٰهِيْمَ ﴿٦٩﴾

69. ನಾವು ಹೇಳಿದೆವು: "ಓ ಅಗ್ನಿಯೇ, ತಣ್ಣಗಾಗಿ ಬಿಡು ಮತ್ತು ಇಬ್‌ರಾಹೀಮ್‌ರ ಪಾಲಿಗೆ ಸುರಕ್ಷೆಯಾಗು."[9]

وَاَرَادُوْا بِهٖ كَيْدًا فَجَعَلْنٰهُمُ الْاَخْسَرِيْنَ ﴿٧٠﴾

70. ಅವರು, ಇಬ್‌ರಾಹೀಮರಿಗೆ ಕೇಡುಂಟು ಮಾಡಬಯಸಿದ್ದರು. ಆದರೆ ನಾವು ಅವರನ್ನು ಸಂಪೂರ್ಣ ವಿಫಲಗೊಳಿಸಿಬಿಟ್ಟೆವು-

وَنَجَّيْنٰهُ وَلُوْطًا اِلَى الْاَرْضِ الَّتِيْ بٰرَكْنَا فِيْهَا لِلْعٰلَمِيْنَ ﴿٧١﴾

71. ಮತ್ತು ನಾವು ಅವರನ್ನೂ ಲೂತರನ್ನೂ ರಕ್ಷಿಸಿ ನಾವು ಲೋಕ ವಾಸಿಗಳಿಗೆ ಸಮೃದ್ಧಿಯನ್ನಿರಿಸಿರುವಂತಹ ಭೂಭಾಗಕ್ಕೆ ಕೊಂಡೊಯ್ದೆವು.

وَوَهَبْنَا لَهٗٓ اِسْحٰقَ ۭ وَيَعْقُوْبَ نَافِلَةً ۭ وَكُلًّا جَعَلْنَا صٰلِحِيْنَ ﴿٧٢﴾

72. ನಾವು ಅವರಿಗೆ ಇಸ್‌ಹಾಕರನ್ನು ಮಾತ್ರವಲ್ಲ ಯಅ್‌ಕೂಬರನ್ನೂ[10] ದಯಪಾಲಿಸಿದೆವು ಮತ್ತು (ಅವರಲ್ಲಿ) ಪ್ರತಿಯೊಬ್ಬನನ್ನು ಸಜ್ಜನನಾಗಿ ಮಾಡಿದೆವು.

وَجَعَلْنٰهُمْ اَىِٕمَّةً يَّهْدُوْنَ بِاَمْرِنَا وَاَوْحَيْنَآ اِلَيْهِمْ فِعْلَ الْخَيْرٰتِ وَاِقَامَ الصَّلٰوةِ وَاِيْتَاۗءَ الزَّكٰوةِ ۚ وَكَانُوْا لَنَا عٰبِدِيْنَ ﴿٧٣﴾

73. ನಾವು ಅವರನ್ನು ನಮ್ಮ ಅಪ್ಪಣೆಯಂತೆ ಮಾರ್ಗದರ್ಶನ ನೀಡುತ್ತಿದ್ದ ನಾಯಕರನ್ನಾಗಿ ಮಾಡಿದೆವು ಮತ್ತು ನಾವು ಅವರಿಗೆ 'ದಿವ್ಯವಾಣಿ' ಮೂಲಕ ಸತ್ಕರ್ಮವೆಸಗುವ, ನಮಾಝ್ ಸಂಸ್ಥಾಪಿಸುವ ಮತ್ತು ಝಕಾತ್ ನೀಡುವ ಆದೇಶ ನೀಡಿದೆವು ಮತ್ತು ಅವರು ನಮ್ಮ ಉಪಾಸಕರಾಗಿದ್ದರು.

وَلُوْطًا اٰتَيْنٰهُ حُكْمًا وَّعِلْمًا وَّنَجَّيْنٰهُ مِنَ الْقَرْيَةِ الَّتِيْ كَانَتْ تَّعْمَلُ الْخَبٰۗىِٕثَ ۭ اِنَّهُمْ كَانُوْا قَوْمَ سَوْءٍ فٰسِقِيْنَ ﴿٧٤﴾

74. ಲೂತರಿಗೆ ನಾವು 'ನಿರ್ಧಾರ ಶಕ್ತಿ' ಮತ್ತು ಜ್ಞಾನ ದಯಪಾಲಿಸಿದೆವು. ಅವರನ್ನು ದುಷ್ಕರ್ಮವೆಸಗುತ್ತಿದ್ದ ಆ ನಾಡಿನಿಂದ ರಕ್ಷಿಸಿ ಕೊಂಡೊಯ್ದೆವು. ವಾಸ್ತವದಲ್ಲಿ ಅದು ಅತ್ಯಂತ ದುಷ್ಟ, ಕರ್ಮ ಭ್ರಷ್ಟ ಜನಾಂಗವಾಗಿತ್ತು.

---

9. ಅವರು ವಸ್ತುಶಃ ತಮ್ಮ ತೀರ್ಮಾನವನ್ನು ಕಾರ್ಯಗತಗೊಳಿಸಿದರು. ಅಗ್ನಿಕುಂಡವನ್ನು ಸಿದ್ಧಪಡಿಸಿ ಅವರು ಹ. ಇಬ್‌ರಾಹೀಮ್‌ರನ್ನು(ಅ) ಅದರಲ್ಲಿ ಎಸೆದಾಗ ಅಲ್ಲಾಹನು ಅಗ್ನಿಗೆ, ಇಬ್‌ರಾಹೀಮ್‌ರ(ಅ) ಪಾಲಿಗೆ ತಣ್ಣಗಾಗುವಂತೆ ಮತ್ತು ಹಾನಿರಹಿತವಾಗುವಂತೆ ಆಜ್ಞಾಪಿಸಿದನು ಎಂದು ಈ ಪದಗಳಿಂದ ವ್ಯಕ್ತವಾಗುತ್ತದೆ. ವಿಷಯಾನುಬಂಧವೂ ಇದನ್ನೇ ಪುಷ್ಟೀಕರಿಸುತ್ತದೆ. ಇದೂ ಕುರ್‌ಆನಿನಲ್ಲಿ ವಿವರಿಸಲಾಗಿರುವ ಪವಾಡಗಳಲ್ಲಿ ಒಂದಾಗಿದೆ.

10. ಅರ್ಥಾತ್- ಮಗನ ನಂತರ ಮೊಮ್ಮಗನನ್ನೂ ಪ್ರವಾದಿತ್ವದ ಪದವಿಗೆ ನೇಮಿಸಲಾಯಿತು.

75. ಮತ್ತು ಲೂತರನ್ನು ನಾವು ನಮ್ಮ ಕೃಪೆಯೊಳಗೆ ಪ್ರವೇಶ ಗೊಳಿಸಿದೆವು. ಅವರು ಸಜ್ಜನರಲ್ಲಾಗಿದ್ದರು.

وَ اَدْخَلْنٰهُ فِيْ رَحْمَتِنَا ۭ اِنَّهٗ مِنَ الصّٰلِحِيْنَ ۝75

76. ಮತ್ತು ನಾವು ಇದೇ ಅನುಗ್ರಹವನ್ನು ನೂಹರಿಗೆ ನೀಡಿದ್ದೆವು. ಇವರೆಲ್ಲರಿಗಿಂತಲೂ ಮುಂಚೆ ಅವರು ನಮ್ಮನ್ನು ಕೂಗಿ ಕರೆದಿದ್ದುದನ್ನು ಸ್ಮರಿಸಿರಿ. ನಾವು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದೆವು. ಅವರನ್ನೂ ಅವರ ಮನೆಯವರನ್ನೂ ಮಹಾ ಸಂಕಷ್ಟದಿಂದ ಪಾರುಗಾಣಿಸಿದೆವು-

وَ نُوْحًا اِذْ نَادٰى مِنْ قَبْلُ فَاسْتَجَبْنَا لَهٗ فَنَجَّيْنٰهُ وَ اَهْلَهٗ مِنَ الْكَرْبِ الْعَظِيْمِ ۝76

77. ಮತ್ತು ನಮ್ಮ ನಿದರ್ಶನಗಳನ್ನು ಸುಳ್ಳಾಗಿಸಿದ್ದ ಜನಾಂಗದ ವಿರುದ್ಧ ಅವರಿಗೆ ಸಹಾಯ ಮಾಡಿದೆವು. ಅವರು ಬಹಳ ಕೆಟ್ಟವ ರಾಗಿದ್ದರು. ಆದುದರಿಂದ ನಾವು ಅವರೆಲ್ಲರನ್ನೂ ಮುಳುಗಿಸಿ ಬಿಟ್ಟೆವು.

وَ نَصَرْنٰهُ مِنَ الْقَوْمِ الَّذِيْنَ كَذَّبُوْا بِاٰيٰتِنَا ۭ اِنَّهُمْ كَانُوْا قَوْمَ سَوْءٍ فَاَغْرَقْنٰهُمْ اَجْمَعِيْنَ ۝77

78. ಇದೇ ಅನುಗ್ರಹವನ್ನು ನಾವು ದಾವೂದ್ ಮತ್ತು ಸುಲೈಮಾನರಿಗೂ ದಯಪಾಲಿಸಿದೆವು. ರಾತ್ರಿ ವೇಳೆ ಇತರರ ಆಡುಗಳು ಚದುರಿ ಕೊಂಡಿದ್ದ ಒಂದು ಹೊಲದ ಮೊಕದ್ದಮೆಯಲ್ಲಿ (ಅವರಿಬ್ಬರೂ) ತೀರ್ಪು ನೀಡುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ. ನಾವು ಅವರ ನ್ಯಾಯ ತೀರ್ಮಾನವನ್ನು ಸ್ವತಃ ವೀಕ್ಷಿಸುತ್ತಿದ್ದೆವು.

وَ دَاوٗدَ وَ سُلَيْمٰنَ اِذْ يَحْكُمٰنِ فِي الْحَرْثِ اِذْ نَفَشَتْ فِيْهِ غَنَمُ الْقَوْمِ ۚ وَ كُنَّا لِحُكْمِهِمْ شٰهِدِيْنَ ۝78

79. ಆ ವೇಳೆ ನಾವು ಸರಿಯಾದ ತೀರ್ಮಾನವನ್ನು ಸುಲೈಮಾನರಿಗೆ ಮನವರಿಕೆ ಮಾಡಿಕೊಟ್ಟೆವು. ವಸ್ತುತಃ ತೀರ್ಮಾನದ ಶಕ್ತಿ ಮತ್ತು ಜ್ಞಾನಗಳನ್ನು ನಾವು ಇಬ್ಬರಿಗೂ ದಯಪಾಲಿಸಿದ್ದೆವು. ನಾವು ದಾವೂದರ ಜೊತೆಗೆ 'ಸ್ತುತಿಸುವ' ಪರ್ವತಗಳನ್ನೂ ಪಕ್ಷಿಗಳನ್ನೂ ಅಧೀನಗೊಳಿಸಿ ಕೊಟ್ಟೆವು, ಇದನ್ನು ಮಾಡಿದವರು ನಾವೇ ಆಗಿದ್ದೆವು.

فَفَهَّمْنٰهَا سُلَيْمٰنَ ۚ وَ كُلًّا اٰتَيْنَا حُكْمًا وَّ عِلْمًا ۡ وَّ سَخَّرْنَا مَعَ دَاوٗدَ الْجِبَالَ يُسَبِّحْنَ وَ الطَّيْرَ ۭ وَ كُنَّا فٰعِلِيْنَ ۝79

80. (ಯುದ್ಧದ ವೇಳೆ) ನಿಮ್ಮನ್ನು ಪರಸ್ಪರರ ಹೊಡೆತದಿಂದ ರಕ್ಷಿಸಲಿಕ್ಕಾಗಿ ನಾವು ಅವರಿಗೆ ನಿಮ್ಮ ಪ್ರಯೋಜನಕ್ಕಾಗಿ ಕವಚ ಮಾಡುವ ಉದ್ಯಮವನ್ನು ಕಲಿಸಿದ್ದೆವು. ಹೀಗಿರುವಾಗ ನೀವು ಕೃತಜ್ಞರಾಗುವಿರಾ?

وَ عَلَّمْنٰهُ صَنْعَةَ لَبُوْسٍ لَّكُمْ لِتُحْصِنَكُمْ مِّنْۢ بَاْسِكُمْ ۚ فَهَلْ اَنْتُمْ شٰكِرُوْنَ ۝80

81. ನಾವು ಸುಲೈಮಾನರಿಗೆ ಪ್ರಬಲ ಗಾಳಿಯನ್ನು ಅಧೀನಗೊಳಿಸಿಕೊಟ್ಟಿ ದ್ದೆವು. ಅದು (ಅವರ ಅಪ್ಪಣೆಯಿಂದ) ನಾವು ಸಮೃದ್ಧಿ

وَ لِسُلَيْمٰنَ الرِّيْحَ عَاصِفَةً تَجْرِيْ بِاَمْرِهٖٓ اِلَى الْاَرْضِ الَّتِيْ بٰرَكْنَا فِيْهَا ۭ

ಯನ್ನಿರಿಸಿರುವ ಭೂಭಾಗದ ಕಡೆಗೆ ಬೀಸುತ್ತಿತ್ತು. ನಾವು ಸಕಲ ವಸ್ತುಗಳ ಜ್ಞಾನವುಳ್ಳವರಾಗಿರುತ್ತೇವೆ.

وَكُنَّا بِكُلِّ شَيْءٍ عَٰلِمِينَ ٨١

82. ಮತ್ತು ಶೈತಾನರ ಪೈಕಿ ಅನೇಕರನ್ನು ನಾವು ಅವರ ನಿಯಂತ್ರಣಕ್ಕೆ ತಂದುಕೊಟ್ಟಿದ್ದೆವು. ಅವರು ಅವರಿಗಾಗಿ (ಸುಲೈಮಾನರಿಗಾಗಿ) ಮುಳುಗೇಳುತ್ತಿದ್ದರು ಮಾತ್ರವಲ್ಲದೆ ಇತರ ಕೆಲಸಗಳನ್ನೂ ಮಾಡುತ್ತಿದ್ದರು. ಇವರೆಲ್ಲರ ಮೇಲ್ವಿಚಾರಕರು ನಾವೇ ಆಗಿದ್ದೆವು.

وَمِنَ ٱلشَّيَٰطِينِ مَن يَغُوصُونَ لَهُۥ وَيَعْمَلُونَ عَمَلًا دُونَ ذَٰلِكَ ۖ وَكُنَّا لَهُمْ حَٰفِظِينَ ٨٢

83. ಮತ್ತು ಇವನ್ನೇ (ವಿವೇಕ, ತೀರ್ಪುಶಕ್ತಿ ಮತ್ತು ಜ್ಞಾನದ ಅನುಗ್ರಹಗಳನ್ನೇ) ನಾವು ಅಯ್ಯೂಬರಿಗೂ ನೀಡಿದ್ದೆವು. ಅವರು, "ನನಗೆ ರೋಗ ತಗಲಿ ಹೋಗಿದೆ. ನೀನು ಕರುಣಾಳುಗಳಲ್ಲಿ ಅತ್ಯಂತ ಕರುಣಾಳು ಆಗಿರುತ್ತೀ" ಎಂದು ತಮ್ಮ ಪ್ರಭುವನ್ನು ಕೂಗಿ ಕರೆದ ಸಂದರ್ಭವನ್ನು ಸ್ಮರಿಸಿರಿ.

وَأَيُّوبَ إِذْ نَادَىٰ رَبَّهُۥٓ أَنِّى مَسَّنِىَ ٱلضُّرُّ وَأَنتَ أَرْحَمُ ٱلرَّٰحِمِينَ ٨٣

84. ನಾವು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದೆವು. ಅವರಿಗಿದ್ದ ಬಾಧೆಯನ್ನು ದೂರೀಕರಿಸಿದೆವು ಮತ್ತು ಅವರಿಗೆ ಅವರ ಮಕ್ಕಳು ಮರಿಗಳನ್ನು ಮಾತ್ರ ನೀಡಿದುದಲ್ಲ, ನಮ್ಮ ವಿಶಿಷ್ಟ ಅನುಗ್ರಹ ವೆಂಬಂತೆ ಅವರೊಂದಿಗೆ ಅಷ್ಟೇ ಮತ್ತೂ ಕೊಟ್ಟೆವು. ಉಪಾಸಕ ದಾಸರಿಗೆ ಇದೊಂದು ಪಾಠವಾಗಲೆಂದು.

فَٱسْتَجَبْنَا لَهُۥ فَكَشَفْنَا مَا بِهِۦ مِن ضُرٍّ ۖ وَءَاتَيْنَٰهُ أَهْلَهُۥ وَمِثْلَهُم مَّعَهُمْ رَحْمَةً مِّنْ عِندِنَا وَذِكْرَىٰ لِلْعَٰبِدِينَ ٨٤

85. ಇದೇ ಅನುಗ್ರಹವನ್ನು ಇಸ್ಮಾಈಲ್, ಇದ್ರೀಸ್ ಮತ್ತು ದುಲ್ ಕಿಫ್ಲ್‌ರಿಗೂ ನೀಡಿದೆವು. ಇವರೆಲ್ಲರೂ ಸಹನಶೀಲರಾಗಿದ್ದರು.

وَإِسْمَٰعِيلَ وَإِدْرِيسَ وَذَا ٱلْكِفْلِ ۖ كُلٌّ مِّنَ ٱلصَّٰبِرِينَ ٨٥

86. ಇವರು ಸಜ್ಜನರಲ್ಲಾಗಿದ್ದ ಕಾರಣ ಇವರನ್ನು ನಾವು ನಮ್ಮ ಕೃಪೆಯೊಳಗೆ ಸೇರಿಸಿಕೊಂಡೆವು.

وَأَدْخَلْنَٰهُمْ فِى رَحْمَتِنَآ ۖ إِنَّهُم مِّنَ ٱلصَّٰلِحِينَ ٨٦

87. ಮತ್ಸ್ಯದವರನ್ನು[11] ನಾವು ಗೌರವಿಸಿದೆವು. ಅವರು ಕೋಪಗೊಂಡು ಹೊರಟು ಹೋಗಿದ್ದ ಸಂದರ್ಭವನ್ನು ಸ್ಮರಿಸಿರಿ.[12] ಅವರನ್ನು ನಾವು ಹಿಡಿಯಲಾರೆವೆಂದು ಅವರು ಭಾವಿಸಿದ್ದರು. ಕೊನೆಗೆ

وَذَا ٱلنُّونِ إِذ ذَّهَبَ مُغَٰضِبًا فَظَنَّ أَن لَّن نَّقْدِرَ عَلَيْهِ فَنَادَىٰ فِى ٱلظُّلُمَٰتِ

11. ಅರ್ಥಾತ್- ಹ. ಯೂನುಸ್(ಅ)- ಕೆಲವೆಡೆ ಅವರ ಹೆಸರು ಹೇಳಲಾಗಿದ್ದರೆ ಇನ್ನು ಕೆಲವೆಡೆ 'ದುನ್ನೂನ್' ಮತ್ತು 'ಸಾಹಿಬಿಲ್ ಹೂತ್' ಎನ್ನಲಾಗಿದೆ. ಅರ್ಥಾತ್ 'ಮತ್ಸ್ಯದವರು' ಎಂಬ ಬಿರುದಿನಿಂದ ಅವರನ್ನು ಸ್ಮರಿಸಲಾಗಿದೆ. ಅದರ ಅರ್ಥ ಅವರು ಮೀನನ್ನು ಹಿಡಿಯುತ್ತಿದ್ದರು ಅಥವಾ ಅದನ್ನು ಮಾರುತ್ತಿದ್ದರು ಎಂದಲ್ಲ. ಅಲ್ಲಾಹನ ಇಚ್ಛೆಯಂತೆ ಅವರನ್ನು ಮೀನೊಂದು ನುಂಗಿ ಬಿಟ್ಟಿತ್ತಾದ್ದರಿಂದ ಈ ಮಾತು ಹೇಳಲಾಗಿದೆ. ಅದರ ವೃತ್ತಾಂತವನ್ನು ಅಸ್ಸಾಫ್ಫಾತ್ ಅಧ್ಯಾಯ 142ನೆಯ ಸೂಕ್ತದಲ್ಲಿ ವಿವರಿಸಲಾಗಿದೆ.

12. ಅರ್ಥಾತ್- ಅವರು ತಮ್ಮ ಜನಾಂಗದ ಬಗ್ಗೆ ಅಸಮಾಧಾನ ತಾಳಿ ದೇವನ ವತಿಯಿಂದ ವಲಸೆಯ ಆದೇಶ ಬರುವುದಕ್ಕೆ ಹಾಗೂ ತಮ್ಮ ಕರ್ತವ್ಯಪಾಲನೆ ಮಾಡಬೇಕಾದ ಸ್ಥಳದಿಂದ ಹೊರಡುವುದು ಸಿಂಧುವಾಗಿ ಬಿಡುವುದಕ್ಕೆ ಮೊದಲೇ ಅಲ್ಲಿಂದ ಹೊರಟು ಹೋದರು.

ಅವರು ಅಂಧಕಾರದೊಳಗಿಂದ ಕೂಗಿ ಪ್ರಾರ್ಥಿಸಿದರು;[13] "ನಿನ್ನ ಹೊರತು ಅನ್ಯ ದೇವನಿಲ್ಲ. ನೀನು ಪರಮ ಪಾವನನು ನಿಶ್ಚಯ ವಾಗಿಯೂ ನಾನು ಅಪರಾಧವೆಸಗಿದೆನು."

أَن لَّآ إِلَٰهَ إِلَّآ أَنتَ سُبْحَٰنَكَ إِنِّي كُنتُ مِنَ ٱلظَّٰلِمِينَ ﴿٨٧﴾

88. ಆಗ ನಾವು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದೆವು ಮತ್ತು ಅವರನ್ನು ದುಃಖದಿಂದ ಪಾರುಗಾಣಿಸಿದೆವು. ಇದೇ ರೀತಿ ನಾವು ಸತ್ಯವಿಶ್ವಾಸಿಗಳನ್ನು ರಕ್ಷಿಸಿಕೊಳ್ಳುತ್ತೇವೆ.

فَٱسْتَجَبْنَا لَهُۥ وَنَجَّيْنَٰهُ مِنَ ٱلْغَمِّ وَكَذَٰلِكَ نُـۨجِى ٱلْمُؤْمِنِينَ ﴿٨٨﴾

89. 'ಝಕರಿಯ್ಯಾ' (ರಿಗೂ ನಾವು ಅನುಗ್ರಹ ನೀಡಿದೆವು) ಅವರು, "ನನ್ನ ಪ್ರಭೂ ನನ್ನನ್ನು ಏಕಾಂಗಿಯಾಗಿ ಬಿಟ್ಟು ಬಿಡಬೇಡ. ಅತ್ಯುತ್ತಮ ವಾರೀಸುದಾರ ನೀನೇ ಆಗಿರುತ್ತೀ" ಎಂದು ತನ್ನ ಪ್ರಭುವನ್ನು ಕೂಗಿ ಕರೆದ ಸಂದರ್ಭವನ್ನು ಸ್ಮರಿಸಿರಿ.

وَزَكَرِيَّآ إِذْ نَادَىٰ رَبَّهُۥ رَبِّ لَا تَذَرْنِى فَرْدًا وَأَنتَ خَيْرُ ٱلْوَٰرِثِينَ ﴿٨٩﴾

90. ಆ ಪ್ರಕಾರ ನಾವು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದೆವು ಮತ್ತು ಅವರಿಗೆ ಯಹ್ಯಾರನ್ನು ನೀಡಿದೆವು. ಅವರ ಪತ್ನಿಯನ್ನು ಅವರಿಗಾಗಿ ಸರಿಪಡಿಸಿದೆವು. ಇವರೆಲ್ಲರೂ ಪುಣ್ಯ ಕಾರ್ಯಗಳಲ್ಲಿ ಉತ್ಸುಕರಾಗಿದ್ದರು. ನಮ್ಮನ್ನು ಒಲವು ಹಾಗೂ ಭಯದೊಂದಿಗೆ ಪ್ರಾರ್ಥಿಸುತ್ತಿದ್ದರು ಮತ್ತು ನಮ್ಮ ಮುಂದೆ ಬಾಗಿಕೊಂಡಿದ್ದರು.

فَٱسْتَجَبْنَا لَهُۥ وَوَهَبْنَا لَهُۥ يَحْيَىٰ وَأَصْلَحْنَا لَهُۥ زَوْجَهُۥٓ ۚ إِنَّهُمْ كَانُوا۟ يُسَٰرِعُونَ فِى ٱلْخَيْرَٰتِ وَيَدْعُونَنَا رَغَبًا وَرَهَبًا ۖ وَكَانُوا۟ لَنَا خَٰشِعِينَ ﴿٩٠﴾

91. ಮತ್ತು ತನ್ನ ಪಾವಿತ್ರ್ಯವನ್ನು ರಕ್ಷಿಸಿಕೊಂಡ ಆ ಸ್ತ್ರೀಯ ವಿಷಯ[14] ನಾವು ಅವಳಲ್ಲಿ ನಮ್ಮ ಆತ್ಮದಿಂದ ಊದಿದೆವು ಮತ್ತು ಅವಳನ್ನೂ ಅವಳ ಪುತ್ರನನ್ನೂ ಇಡೀ ಜಗತ್ತಿಗೆ ನಿದರ್ಶನ ವಾಗಿ ಮಾಡಿಬಿಟ್ಟೆವು.

وَٱلَّتِىٓ أَحْصَنَتْ فَرْجَهَا فَنَفَخْنَا فِيهَا مِن رُّوحِنَا وَجَعَلْنَٰهَا وَٱبْنَهَآ ءَايَةً لِّلْعَٰلَمِينَ ﴿٩١﴾

92. ಈ ನಿಮ್ಮ ಸಮುದಾಯವು ವಾಸ್ತವದಲ್ಲಿ ಒಂದೇ ಸಮುದಾಯ ವಾಗಿದೆ ಮತ್ತು ನಾನು ನಿಮ್ಮ ಪ್ರಭುವಾಗಿದ್ದೇನೆ. ಆದುದರಿಂದ ನೀವು ನನ್ನ ದಾಸ್ಯ-ಆರಾಧನೆ ಮಾಡಿರಿ.

إِنَّ هَٰذِهِۦٓ أُمَّتُكُمْ أُمَّةً وَٰحِدَةً وَأَنَا۠ رَبُّكُمْ فَٱعْبُدُونِ ﴿٩٢﴾

93. ಆದರೆ ಅವರು ಪರಸ್ಪರ ತಮ್ಮ ಧರ್ಮವನ್ನು ಛಿನ್ನವಿಛಿನ್ನವಾಗಿ ಮಾಡಿ ಬಿಟ್ಟರು. ಎಲ್ಲರಿಗೂ ನಮ್ಮ ಕಡೆಗೇ ಮರಳಲಿಕ್ಕಿದೆ.

وَتَقَطَّعُوٓا۟ أَمْرَهُم بَيْنَهُمْ ۖ كُلٌّ إِلَيْنَا رَٰجِعُونَ ﴿٩٣﴾ ع

13. ಅರ್ಥಾತ್- ಮೇಲಿನಿಂದ ಸಮುದ್ರದ ಕಗ್ಗತ್ತಲು ಆವರಿಸಿರುವ ಮತ್ತು ಮೊದಲೇ ಕತ್ತಲಿನಿಂದ ಕೂಡಿರುವ ಮೀನಿನ ಹೊಟ್ಟೆಯಲ್ಲಿ.

14. ಅರ್ಥಾತ್- ಹ. ಮರ್ಯಮ್(ಅ)

94. ಇನ್ನು ಯಾರು ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ಸತ್ಕರ್ಮ ವೆಸಗುವನೋ ಅವನ ಕರ್ಮವು ತಿರಸ್ಕೃತವಾಗದು ಮತ್ತು ನಾವು ಅದನ್ನು ಲಿಖಿತಗೊಳಿಸುತ್ತಿದ್ದೇವೆ.

فَمَنْ يَّعْمَلْ مِنَ الصّٰلِحٰتِ وَهُوَ مُؤْمِنٌ فَلَا كُفْرَانَ لِسَعْيِهٖ ۚ وَاِنَّا لَهٗ كٰتِبُوْنَ ۝٩٤

95-96. ಯಅ್‌ಜೂಜ್ ಮಅ್‌ಜೂಜರು ಬಿಡುಗಡೆಗೊಳಿಸಲ್ಪಡುವ ವರೆಗೂ ನಾವು ನಾಶಗೊಳಿಸಿರುವ ನಾಡು ಪುನಃ ಮರಳುವುದು ಸಾಧ್ಯವಿಲ್ಲ. ಅವರು ಪ್ರತಿಯೊಂದು ಉನ್ನತ ಸ್ಥಳದಿಂದ ಹೊರ ಬರುವರು.

وَحَرٰمٌ عَلٰى قَرْيَةٍ اَهْلَكْنٰهَآ اَنَّهُمْ لَا يَرْجِعُوْنَ ۝٩٥

حَتّٰٓى اِذَا فُتِحَتْ يَاْجُوْجُ وَمَاْجُوْجُ وَهُمْ مِّنْ كُلِّ حَدَبٍ يَّنْسِلُوْنَ ۝٩٦

97. ಮತ್ತು ಸತ್ಯಪೂರ್ಣ ವಾಗ್ದಾನ ನೆರವೇರುವ ಸಮಯ ಸನ್ನಿಹಿತ ವಾದಾಗ[15] ಹಠಾತ್ತನೆ ಸತ್ಯನಿಷೇಧಿಗಳ ತೆರೆದ ಕಣ್ಣುಗಳು ತೆರೆದೇ ಇದ್ದು ಬಿಡುವುವು. ಅವರು ಹೇಳುವರು; "ಅಯ್ಯೋ, ನಮ್ಮ ದುರದೃಷ್ಟವೇ! ನಾವು ಈ ವಿಷಯದ ಬಗ್ಗೆ ಅಲಕ್ಷ್ಯರಾಗಿದ್ದೆವು. ನಿಜವಾಗಿ ನಾವು ಅಕ್ರಮಿಗಳಾಗಿದ್ದೆವು."

وَاقْتَرَبَ الْوَعْدُ الْحَقُّ فَاِذَا هِيَ شَاخِصَةٌ اَبْصَارُ الَّذِيْنَ كَفَرُوْا ۗ يٰوَيْلَنَا قَدْ كُنَّا فِيْ غَفْلَةٍ مِّنْ هٰذَا بَلْ كُنَّا ظٰلِمِيْنَ ۝٩٧

98. ನೀವು ಮತ್ತು ಅಲ್ಲಾಹನನ್ನು ಬಿಟ್ಟು ನೀವು ಪೂಜಿಸುವ ಆರಾಧ್ಯ ವಸ್ತುಗಳು ನರಕಾಗ್ನಿಯ ಇಂಧನಗಳು" ನಿಮಗೆ ಅಲ್ಲಿಗೇ ಹೋಗ ಬೇಕಾಗಿದೆ.[16]

اِنَّكُمْ وَمَا تَعْبُدُوْنَ مِنْ دُوْنِ اللّٰهِ حَصَبُ جَهَنَّمَ ۗ اَنْتُمْ لَهَا وٰرِدُوْنَ ۝٩٨

99. ಇವುಗಳು ನಿಜಕ್ಕೂ ದೇವರಾಗಿರುತ್ತಿದ್ದರೆ ಅಲ್ಲಿ ಹೋಗುತ್ತಿರಲಿಲ್ಲ. ಇವರೆಲ್ಲರಿಗೂ ಸದಾ ಅಲ್ಲೇ ಇರಬೇಕಾಗಿದೆ.

لَوْ كَانَ هٰٓؤُلَآءِ اٰلِهَةً مَّا وَرَدُوْهَا ۗ وَكُلٌّ فِيْهَا خٰلِدُوْنَ ۝٩٩

100. ಅಲ್ಲಿ ಅವರು ಬುಸುಗುಟ್ಟುವರು ಮತ್ತು ಅಲ್ಲಿ ಅವರಿಗೆ ಮತ್ತೇನೂ ಕೇಳಿಸದು.

لَهُمْ فِيْهَا زَفِيْرٌ وَّهُمْ فِيْهَا لَا يَسْمَعُوْنَ ۝١٠٠

101. ಇನ್ನು ನಮ್ಮ ಕಡೆಯಿಂದ ಯಾರ ಪರವಾಗಿ ಮೊದಲೇ ಒಳಿತಿನ ನಿರ್ಧಾರವಾಗಿರುವುದೋ ಅವರು ಖಂಡಿತವಾಗಿಯೂ ಅದರಿಂದ ದೂರವಿರಿಸಲ್ಪಡುವರು.

اِنَّ الَّذِيْنَ سَبَقَتْ لَهُمْ مِّنَّا الْحُسْنٰٓى ۙ اُولٰٓئِكَ عَنْهَا مُبْعَدُوْنَ ۝١٠١

15. ಅರ್ಥಾತ್- ನಿರ್ಣಾಯಕ ದಿನ ಸನ್ನಿಹಿತವಾಗುವ ಸಮಯ.

16. ಕೆಲವು ಉಲ್ಲೇಖಗಳಲ್ಲಿ ಬಂದಿರುವಂತೆ ಈ ಸೂಕ್ತದ ಬಗ್ಗೆ ಬಹುದೇವವಿಶ್ವಾಸಿಗಳ ನಾಯಕರ ಪೈಕಿ ಒಬ್ಬನು ಆಕ್ಷೇಪವೆತ್ತುತ್ತಾ ಹೇಳಿದನು, “ಹಾಗಾದರೆ ನಮ್ಮ ಆರಾಧ್ಯರುಗಳು ಮಾತ್ರವಲ್ಲ ಮಸೀಹ್, ಉಝೈರ್ ಮತ್ತು ದೇವಚರರೂ ನರಕಕ್ಕೆ ಹೋಗುವರು. ಏಕೆಂದರೆ ಲೋಕದಲ್ಲಿ ಅವರ ಆರಾಧನೆಯನ್ನೂ ಕೈಗೊಳ್ಳಲಾಗುತ್ತಿದೆ.” ಅದಕ್ಕೆ ಪ್ರವಾದಿವರ್ಯರು(ಸ) ಹೇಳಿದರು, "ಹೌದು! ಅಲ್ಲಾಹನ ಹೊರತು ತನ್ನ ಆರಾಧನೆ ನಡೆಯಬೇಕು ಎಂದು ಬಯಸಿದ ಪ್ರತಿಯೊಬ್ಬನೂ ಅವರ ಆರಾಧನೆ ಮಾಡಿದವರ ಜತೆಗಿರುವನು."

102. ಅದರ ಕಿರು ಧ್ವನಿಯನ್ನೂ ಅವರು ಕೇಳಲಾರರು ಮತ್ತು ಅವರು ಶಾಶ್ವತವಾಗಿ ತಮ್ಮ ಮನಮೆಚ್ಚುಗೆಯ ವಸ್ತುಗಳ ನಡುವೆ ಇರುವರು.

لَا يَسْمَعُونَ حَسِيسَهَا ۖ وَهُمْ فِي مَا اشْتَهَتْ أَنفُسُهُمْ خَالِدُونَ ﴿١٠٢﴾

103. ಅತ್ಯಂತ ಭಯಭೀತಿಯ ಆ ಕಾಲವು ಅವರಿಗೆ ಕೊಂಚವೂ ವ್ಯಾಕುಲತೆಯನ್ನುಂಟು ಮಾಡಲಾರದು ಮತ್ತು ದೇವಚರರು ಇದಿರ್ಗೊಂಡು ಇದು ನಿಮಗೆ ವಾಗ್ದಾನ ಮಾಡಲಾಗುತ್ತಿದ್ದ ಅದೇ ನಿಮ್ಮ ದಿನ ಎನ್ನುತ್ತಾ ಅವರನ್ನು ಬರಮಾಡಿಕೊಳ್ಳುವರು.

لَا يَحْزُنُهُمُ الْفَزَعُ الْأَكْبَرُ وَتَتَلَقَّاهُمُ الْمَلَائِكَةُ هَٰذَا يَوْمُكُمُ الَّذِي كُنتُمْ تُوعَدُونَ ﴿١٠٣﴾

104. ಗ್ರಂಥಗಳಿಗಾಗಿ ಸುರುಳಿಯಲ್ಲಿ ಹಾಳೆಗಳನ್ನು ಸುತ್ತುವ ಹಾಗೆ ನಾವು ಅಂದು ಆಕಾಶವನ್ನು ಸುತ್ತಿಟ್ಟು ಬಿಡುವೆವು. ನಾವು ಹಿಂದೆ ಸೃಷ್ಟಿಯ ಆರಂಭ ಮಾಡಿದಂತೆಯೇ ಅದನ್ನು ಪುನರಾವರ್ತಿಸುವೆವು. ಇದು ನಮ್ಮ ಹೊಣೆಯಲ್ಲಿರುವ ಒಂದು ವಾಗ್ದಾನವಾಗಿದೆ ಮತ್ತು ಈ ಕಾರ್ಯವನ್ನು ನಾವು ಮಾಡಿಯೇ ತೀರುವೆವು.

يَوْمَ نَطْوِي السَّمَاءَ كَطَيِّ السِّجِلِّ لِلْكُتُبِ ۚ كَمَا بَدَأْنَا أَوَّلَ خَلْقٍ نُّعِيدُهُ ۚ وَعْدًا عَلَيْنَا ۚ إِنَّا كُنَّا فَاعِلِينَ ﴿١٠٤﴾

105. ನಮ್ಮ ಸಜ್ಜನದಾಸರು ಭೂಮಿಯ ವಾರೀಸುದಾರರಾಗುವರೆಂದು[17] ನಾವು ಝುಬೂರಿನಲ್ಲಿ ಉಪದೇಶದ ಬಳಿಕ ಬರೆದಿರುತ್ತೇವೆ.

وَلَقَدْ كَتَبْنَا فِي الزَّبُورِ مِن بَعْدِ الذِّكْرِ أَنَّ الْأَرْضَ يَرِثُهَا عِبَادِيَ الصَّالِحُونَ ﴿١٠٥﴾

106. ಇದರಲ್ಲಿ ದೇವೋಪಾಸಕರಿಗೆ ಒಂದು ದೊಡ್ಡ ವಾರ್ತೆ ಇದೆ.

إِنَّ فِي هَٰذَا لَبَلَاغًا لِّقَوْمٍ عَابِدِينَ ﴿١٠٦﴾

107. ಪೈಗಂಬರರೇ, ನಾವು ನಿಮ್ಮನ್ನು ಸಕಲ ಲೋಕದವರಿಗೆ ಅನುಗ್ರಹವಾಗಿ ಮಾಡಿ ಕಳುಹಿಸಿರುತ್ತೇವೆ.

وَمَا أَرْسَلْنَاكَ إِلَّا رَحْمَةً لِّلْعَالَمِينَ ﴿١٠٧﴾

108. ಅವರೊಡನೆ ಹೇಳಿರಿ; "ನಿಮ್ಮ ದೇವನು ಏಕೈಕ ದೇವನೆಂದು ನನ್ನ ಬಳಿಗೆ 'ದಿವ್ಯವಾಣಿ' ಬಂದಿರುತ್ತದೆ. ನೀವು ಆಜ್ಞಾನುಸಾರಿಗಳಾಗುತ್ತೀರಾ?"

قُلْ إِنَّمَا يُوحَىٰ إِلَيَّ أَنَّمَا إِلَٰهُكُمْ إِلَٰهٌ وَاحِدٌ ۖ فَهَلْ أَنتُم مُّسْلِمُونَ ﴿١٠٨﴾

109. ಅವರು ವಿಮುಖರಾದರೆ ಅವರೊಡನೆ ಹೇಳಿರಿ, "ನಾನು ಘಂಟಾಘೋಷವಾಗಿ ನಿಮಗೆ ಎಚ್ಚರಿಕೆ ನೀಡಿರುತ್ತೇನೆ. ಇನ್ನು ನಿಮ್ಮೊಡನೆ ವಾಗ್ದಾನ ಮಾಡಲ್ಪಟ್ಟಿರುವಂತಹ ವಿಷಯವು ಸಮೀಪವಿದೆಯೋ ಅಥವಾ ದೂರವಿದೆಯೋ ಎಂಬುದು ನನಗರಿಯದು.

فَإِن تَوَلَّوْا فَقُلْ آذَنتُكُمْ عَلَىٰ سَوَاءٍ ۖ وَإِنْ أَدْرِي أَقَرِيبٌ أَم بَعِيدٌ مَّا تُوعَدُونَ ﴿١٠٩﴾

17. ಈ ಸೂಕ್ತವನ್ನು ತಿಳಿಯಲಿಕ್ಕಾಗಿ ಅಝ್ಝುಮರ್ ಅಧ್ಯಾಯದ 73-74ನೆಯ ಸೂಕ್ತವನ್ನು ನೋಡಿರಿ.

110. ನೀವು ಉಚ್ಚ ಸ್ವರದಿಂದ ಹೇಳುವುದನ್ನೂ ಗುಪ್ತವಾಗಿ ಹೇಳುವುದನ್ನೂ ಅಲ್ಲಾಹನು ಅರಿಯುತ್ತಾನೆ.

إِنَّهُۥ يَعْلَمُ ٱلْجَهْرَ مِنَ ٱلْقَوْلِ وَ
يَعْلَمُ مَا تَكْتُمُونَ ١١٠

111. ಪ್ರಾಯಶಃ ಇದು (ಈ ವಿಳಂಬವು) ನಿಮಗೊಂದು ಪರೀಕ್ಷೆಯಾಗಿದೆಯೆಂದು ನಾನು ಭಾವಿಸುತ್ತೇನೆ ಮತ್ತು ನಿಮಗೆ ಒಂದು ನಿರ್ದಿಷ್ಟ ಕಾಲದ ವರೆಗೆ ಸುಖಿಸುವ ಅವಕಾಶ ಕೊಡಲಾಗುತ್ತಿದೆ."

وَإِنْ أَدْرِي لَعَلَّهُۥ فِتْنَةٌ لَّكُمْ
وَمَتَاعٌ إِلَىٰ حِينٍ ١١١

112. (ಕೊನೆಗೆ) ಸಂದೇಶವಾಹಕರು, "ಓ ನನ್ನ ಪ್ರಭೂ! ಸತ್ಯಸಹಿತ ತೀರ್ಮಾನಿಸಿ ಬಿಡು ಮತ್ತು ಜನರೇ, ನಮ್ಮ ದಯಾಮಯನಾದ ಪ್ರಭು ನೀವು ಸೃಷ್ಟಿಸುತ್ತಿರುವ ಮಾತುಗಳ ವಿರುದ್ಧ ನಮಗೆ ಸಹಾಯಾಧಾರವಾಗಿರುತ್ತಾನೆಂದು" ಹೇಳಿದರು.

قٰلَ رَبِّ احْكُمْ بِالْحَقِّ ۗ وَرَبُّنَا
الرَّحْمٰنُ الْمُسْتَعَانُ عَلٰى مَا تَصِفُوْنَ ١١٢